SRI S. M. YAHYA.— You have to take the substance and not just one line. The principle of it should be understood and not more one sentence. Absorption should be according to rules.

SRI S. BANGARAPPA.— Please don't try to brush aside the G O. A good number of people are involved in this. You may take a little more time and go through the order and tell us whether the order issued is correct on not.

SRI S. M YAHYA.— The annual programme is clear. I cannot say much more than that. The main principle is to train them for employment opportunities and not to provide employment itself. That is quite different. Training for employment is different from training in employment. This is training or employment and not training in employment. After a person is appointed if he is given training that is different. But this is training for employment.

MADAM SPEAKER.—Private Members' Resolution. Sri K.R.S. Naidu to continue his speech.

PRIVATE MEMBERS' RESOLUTIONS

(i) re: Shifting of Race Course, Bangalore to the Out skirts of the City
(Debate Continued)

† ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ): ಮಾನ್ಯ ಅಧ್ಯಕ್ಷಿಣಿಯವರೇ, ಈಗಿನ ಕುದುರೆ ಜೂಜಿನ ಮೈದಾನವನ್ನು ಬೆಂಗಳೂರು ನಗರದ ಹೊರಗಡೆಗೆ ಸ್ಥಳಾಂತರ ಮಾಡುವ ಬಗ್ಗೆ ತಾ. ೨೪-೯-೧೯೭೪ ರಂದು ನಾನು ಪ್ರಾರಂಭ ಮಾಡಿದ ಭಾಷಣವನ್ನು ಇಂದು ಮುಂದುವರೆಸುತ್ತಾ ನಾನು ನಾಲ್ಕು ಮಾತು ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೋ ಏನೋ ನಮ್ಮ ಸರ್ಕಾರದವರು, ಈ ವಿಚಾರದಲ್ಲಿ ಒಂದು ದೊಡ್ಡ ಹೆಜ್ಜೆ ಮುಂದೆ ಇಡುವುದಕ್ಕೆ ಹಿಂದೆಮುಂದೆ ನೋಡುತ್ತಿದ್ದಾರೆ. ಈ ವಿಚಾರದಲ್ಲಿ ಈ ಹಿಂದೆಯೇ ಅನೇಕ ಕಮಿಟಿಗಳು ರಚನೆಯಾಗಿದ್ದವು, ಅವುಗಳ ಪೈಕಿ ದಿವಂಗತ ಶ್ರೀ ದಿವಾನ್ ಮಾಧುವರಾವ್ ಅವರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಕಮಿಟಿಯೂ ಸಹ ಒಂದು. ಅವರು ಒಳ್ಳೆಯ ಅರಿತು ನುರಿತವರಾಗಿದ್ದರು. ಮತ್ತು ದಕ್ಷರಾಗಿದ್ದರು. ಅಂತಹವರೂ ಸಹ ತಮ್ಮ ಒಂದು ವರದಿಯಲ್ಲಿ ಇದನ್ನು ಸ್ಥಳಾಂತರ ಮಾಡ ಬೇಕೆಂದು ತಿಳಿಸಿದ್ದರು. ಅವರು ತಮ್ಮ ವರದಿಯಲ್ಲಿ ಬೆಂಗಳೂರು ನಗರವನ್ನು ೪ ಭಾಗಗಳಾಗಿ ವಿಂಗಡಣೆ ಮಾಡಿದ್ದರು. ಅವು ಯಾವುವುವೆಂದರೆ ಅಡ್ಮಿನಿಸ್ಟ್ರೇಷನ್ ಜೋನ್, ಇಂಡಸ್ಟ್ರಿಯಲ್ ಜೋನ್, ಕಮರ್ಷಿಯಲ್ ಜೋನ್, ಮತ್ತು ರೆಸಿಡೆನ್ಸಿಯಲ್ ಜೋನ್ ಎಂದು ನಾಲ್ಕು ಭಾಗಗಳಾಗಿ ಮಾಡಿದ್ದರು. ಅದರಂತೆ ಇವೊತ್ತಿನದಿವಸ ಈ ರೇಸ್-ಕೋರ್ಸ್ ಅಡ್ಮಿನಿಸ್ಟ್ರೇಷನ್ ಜೋನ್‌ನಿನ ಮಧ್ಯದಲ್ಲಿದೆ. ಈ ರೇಸ್-ಕೋರ್ಸಿಗೆ ಒಂದು ಭಾಗದಲ್ಲಿ ಎ.ಜಿ. ಕಛೇರಿ, ವಿಧಾನಸೌಧವಿದೆ. ಇನ್ನೊಂದು ಕಡೆಯಲ್ಲಿ ವಿದ್ಯಾಸಂಸ್ಥೆಗಳಿವೆ. ರಾಮನಾರಾಯಣ್ ಚಲ್ಲಾರಾಮ್ ಕಾಲೇಜು, ಸೆಂಟ್ರಲ್ ಕಾಲೇಜು, ರೇಣುಕಾರಾಧ್ಯ ಕಾಲೇಜು ಹೀಗೆ ಹಲವಾರು ಕಾಲೇಜುಗಳಿವೆ. ಮತ್ತು ಮತ್ತೊಂದು ಕಡೆ ವೀರಶೈವ ಹಾಸ್ಪಲ್, ಜಯದೇವ ಹಾಸ್ಪಲ್, ವೈಶ್ಯಾ ಹಾಸ್ಪಲ್ ಎಂಬುದಾಗಿ ಹಲವಾರು ಹಾಸ್ಪಲ್‌ಗಳಿವೆ. ಜೊತೆಗೆ ಹೆಣ್ಣುಮಕ್ಕಳ ಕಾಲೇಜು ಸಹ ಇದೆ. ಈ ರೀತಿ ವಿದ್ಯಾಸಂಸ್ಥೆಗಳು, ಹಾಸ್ಪಲ್‌ಗಳು, ಸರ್ಕಾರೀ ಕಛೇರಿಗಳು ಇದರ ಸುತ್ತಮುತ್ತ ಇರುವುದರಿಂದ ವಿದ್ಯಾರ್ಥಿ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಹಿಂದೆ ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಇದರ ಬಗ್ಗೆ "ಒಂದು ಕಮಿಟಿ" ಮಾಡಿದ್ದರು. ಆ ಕಮಿಟಿಯವರು ಸಹ ಇದನ್ನು ಅಲ್ಲಿಂದ ತೆಗೆಯಬೇಕೆಂಬ ಸ್ಪಷ್ಟ ಅಭಿಪ್ರಾಯಕ್ಕೆ ಬಂದಿದ್ದಾರೆ ಹಿಂದೆ ವಾರಕ್ಕೆ ಒಂದು ಸಲ ಅಥವ ತಿಂಗಳಿಗೆ ಒಂದು ಸಲ ರೇಸ್ ನಡೆಯುತ್ತಿತ್ತು, ಆದರೆ ಈಗ ವಾರಕ್ಕೆ ೩-೪ ಸಲ ನಡೆಯುತ್ತಿದೆ. ನನ್ನ ಒಂದು ಅನುಭವದಲ್ಲಿ ಈ ರೇಸ್ ನಡೆಯುವ ದಿವಸ ಅಧಿಕಾರವರ್ಗದವರ ಪೈಕಿ ಶೇಕಡಾ ಹತ್ತರಷ್ಟು ಅಧಿಕಾರಿಗಳು ಕಛೇರಿಗೆ ಬರುವುದಿಲ್ಲ, ಎಲ್ಲರೂ ಅಲ್ಲಿಯೇ ಇರುತ್ತಾರೆ. ಇತ್ತೀಚೆಗೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳಿಗೂ ಸಹ

ಇದರ ಒಂದು ಹುಚ್ಚು ಬಹಳ ಹಿಡಿದಿದೆ ಇದಕ್ಕೆ ಮುಖ್ಯ ಕಾರಣ, ಇದು ನಗರದ ಮಧ್ಯ ಭಾಗದಲ್ಲಿರುವುದು ನಾವು ಸಮತಾವಾದ ಮತ್ತು ಸಮಾಜವಾದ ಎಂದು ಹೇಳುವ ಜನರಾಗಿದ್ದೇವೆ. ಈ ಕಾರಣದಿಂದಲೇ ಹೆಂಡದ ಅಂಗಡಿಗಳು ದೇವಸ್ಥಾನದ ಪಕ್ಕದಲ್ಲಿ, ಸ್ಕೂಲ್‌ಗಳ ಹತ್ತಿರದಲ್ಲಿ, ಬಡವರು ವಾಸ ಮಾಡುವ ಜಾಗದಲ್ಲಿ ಇರಬಾರದೆಂದು ನಾವು ಕಾನೂನು ಸಹ ಮಾಡಿದ್ದೇವೆ ಈ ''ಹೆಂಡ ಮತ್ತು ಜೂಜು'', ಇವೆರಡೂ ಸಹ ಒಂದೇ ಜಾತಿಯ ಕಸುಬು ಎಂದು ಹೇಳಿದರೆ ತಪ್ಪಾಗುವುದಿಲ್ಲ. ''ದಿಢೀರ್'' ಸಾವುಕಾರರಾಗ ಬೇಕೆಂಬ ಕಾರಣದಿಂದ ಈ ಜೂಜ್ ಆಡತಕ್ಕಂಥ ಜನರು ಕೆಲವು ಭಾಗ ಇದ್ದಾರೆ. ಈ ಮೊದಲು ಈ ಕುದುರೆ ಜೂಜು ಅಂದರೆ ಏನು ಎಂಬುದೇ ನಮಗೆ ಗೊತ್ತಿರಲಿಲ್ಲ. ಹಿಂದೆ ನಮ್ಮಲ್ಲಿ ಕೋಳಿ ಕಾಳಗ, ಟಗರು ಕಾಳಗ, ಎಮ್ಮೆ ಕಾಳಗ ಎಂದು ನಡೆಯುತ್ತಿತ್ತು. ಈ ಆಟಗಳೆಲ್ಲಾ ಭಾರತೀಯವಾದುವುವು ಈ ಜೂಜಿನ ಕಥೆ ನಮ್ಮ ಪುರಾಣಗಳಲ್ಲಿಯೂ ಉಲ್ಲೇಖವಾಗಿದೆ, ಇದಕ್ಕೆ ಸಾಕ್ಷಿ ಮಹಾಭಾರತ ಕಥೆಯಲ್ಲಿ ''ಶಕುನಿಯ'' ಪಾತ್ರವೇ ಸಾಕು. ಬ್ರಿಟೀಷರು ನಮ್ಮ ದೇಶಕ್ಕೆ ಬಂದಮೇಲೆ ಅದನ್ನು ನಮ್ಮ ದೇಶದಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆ. ಕುದುರೆಯನ್ನು ಹಿಂದೆ ಯುದ್ಧ ಸವಾರಿ, ಮತ್ತು ಅಶ್ವಮೇದ ಯಾಗಕ್ಕೆ ಉಪಯೋಗ ಮಾಡುತ್ತಿದ್ದರು. ಈಗ ಆ ಬಡಪ್ರಾಣಿಯನ್ನು ನಂಬಿ, ಜೀವನ ಮಾಡುವ ಕಾಲ ಬಂದಿದೆ. ನನಗೆ ಅನ್ನಿಸುತ್ತದೆ ರೇಸ್ ಕೋರ್ಸನ್ನು ಸ್ಥಳಾಂತರ ಮಾಡತಕ್ಕ ಕಾರ್ಯಕ್ರಮ ಏನು ಇದೆ ಅದು ನಮ್ಮ ಸರ್ಕಾರಕ್ಕೆ ದೊಡ್ಡದೇನಲ್ಲ ವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರ ಶಾಂತಿನಗರ. ಹಿಂದೆ ಸೂಳ್ಯ ಎಂದು ಇತ್ತು ಅಲ್ಲಿ ರೇಸ್‌ಕೊರ್ಸ್ ಇತ್ತು. ಆದನ್ನು ಚಾಮರಾಜ ಒಡೆಯರ್ ರವರ ಕಾಲದಲ್ಲಿ ಇಲ್ಲಿಗೆ ಆದನ್ನು ಸ್ಥಳಾಂತರ ಮಾಡಿದರು. ಕಾರಣ ಇಷ್ಟೆ ಹಿಂದೆ. ತಮಗೆ ಗೊತ್ತಿದೆ ಬ್ರಿಟೀಷರ ಕಾಲದಲ್ಲಿ ಲೆಫ್ಟಿನೆಂಟ್ ಕರ್ನಲ್ಸ್ ಮತ್ತು ಇತರೆ ಸೈನ್ಯಾಧಿಕಾರಿಗಳಿಗೆ ಇಂಗ್ಲಿಷ್ ಜನತೆಗೆ ಆದು ಬೇಕಿತ್ತು. ಕಂಟೋನ್‌ಮೆಂಟ್‌ನಲ್ಲಿ ಇರುವ ಜನರನ್ನು ಬೇರೆ ಸ್ಥಳಾಂತರ ಏತಕ್ಕೆ ಮಾಡಿದರು ಎಂದರೆ ಆಗ ಕಂಟೋನ್‌ಮೆಂಟ್ ಸಿಟಿ ಬೇರೆ ಇದ್ದ ಕಾಲದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್, ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಗ್ರಾರ್ಡನ್ ಮೂರೂ ಸೇರಿ ಒಂದು green belt ಇತ್ತು, ಪಟ್ಟಣ ಹೊರಗಡೆ ಇಷ್ಟೊಂದು ಬೃಹದ್ದಾಕಾರವಾಗಿ ಬೆಳೆಯುತ್ತದೆಂದು ಯಾರೂ ತಿಳಿದಿರಲಿಲ್ಲ. ಈಗಲೂ ಕೂಡ ಇದನ್ನು ಇಲ್ಲಿಂದ ಸ್ಥಳಾಂತರಗೊಳಿಸಿ, ಅದರಿಂದ ಆದಾಯವಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ ಅದರಿಂದ ಎಷ್ಟೂಕೋಟಿ ರೂಪಾಯಿಗಳು ಆದಾಯ Entertainment ಜ್ಯಾಕ್ಸ್ ನಿಂದಲೇ ಬರುತ್ತದೆ ಇದರಲ್ಲಿ ನಮ್ಮ ಕಾರ್ಪೊರೇಷನ್‌ಗೆ ಒಂದು ಲಕ್ಷ ರೂಪಾಯಿ ನಷ್ಟು ಸಿಕ್ಕುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಪ್ರಶ್ನೆಗೆ ಮಾನ್ಯ ಹಣ ಕಾಸಿನ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಹೇಳಿದರು, ಆದರಿಂದ ೪ ಕೋಟಿ ರೂಪಾಯಿ ಆದಾಯ ಬರುತ್ತದೆ, ಹಣದ ಮುಗ್ಗಟ್ಟು ಇರುವುದರಿಂದ ಅದನ್ನು ಸ್ಥಳಾಂತರ ಮಾಡುವುದಕ್ಕೆ ಆಗುವುದಿಲ್ಲವೆಂದು ಒತ್ತಿ ಹೇಳಿದರು. ನಾನು ಇದಕ್ಕೆ ಒಂದು ಸಲಹೆ ಮಾಡುತ್ತೇನೆ ನಾಲ್ಕು ಕೋಟಿ ರೂಪಾಯಿ ಗಳಿಗೆ ಬದಲಾಗಿ ೪೦ ಕೋಟಿ ರೂಪಾಯಿ ನಿಮಗೆ ಆದಾಯ ಬರುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಿಹೇಳಬಯಸುತ್ತೇನೆ. ಇದರಬಗ್ಗೆ ಹಲವಾರು ತೊಡಕುಗಳು ಇರಬಹುದು. ಎಜ್ಯುಕೇಶನ್ ಇನ್‌ಸ್ಟಿಟ್ಯೂಟ್‌ಗಳನ್ನು ಮಾಡಲಿ ಎಂದು ಹೇಳುತ್ತೇನೆ. ಇದರ ಸುತ್ತಮುತ್ತಲೂ ಅಂದರೆ ವೈಸೂರು ಬ್ಯಾಂಕಿನವರೆಗೂ ಸುಮಾರು ಪ್ರತಿನಿತ್ಯ ೫ ಲಕ್ಷ ಜನರು ಓಡಾಡುತ್ತಿರುತ್ತಾರೆ ಚಿಕ್ಕಪೇಟೆ, ಬಳೆಪೇಟೆ, ಈ ಕ್ಷೇತ್ರಗಳು ಏನು ಇವೆ ಇವು ಬಹಳ Thickly Populated ಪ್ರದೇಶಗಳಾಗಿವೆ. ಅಲ್ಲಿ ಬಿ. ವಿ. ಕೃಷ್ಣಯ್ಯಂಗಾರ್ ರೋಡನ್ನು ಮಾಡಿದರೂ ಸಹಾ ಅದು ಒಂದು ವ್ಯಾಪಾರ ಕೇಂದ್ರವಾಗಿರುವುದರಿಂದ ವಾಹನಗಳ ಸಂಚಾರಕ್ಕೆ ಬಹಳ ಕಿಕ್ಕಿಂದವಾಗಿದೆ. ಅದನ್ನು ಸ್ಥಳಾಂತರ ಮಾಡುವುದಕ್ಕೆ ಆಗಲಿಲ್ಲ ನನಗನ ಸುತ್ತದೆ ರೇಸ್ ಕೋರ್ಸ್‌ನ್ನು ಸ್ಥಳಾಂತರ ಮಾಡಿ ಆ ಜಾಗದಲ್ಲಿ ಇಂಟರ್ ನ್ಯಾಷನಲ್ ಬಿಸ್‌ನೆಸ್ ಕಾಂಪ್ಲೆಕ್ಸ್ ಮಾಡಿ. ತಾವು ಪಾಶ್ಚಿಮಾತ್ಯ ದೇಶಗಳನ್ನು ಸುತ್ತಿ ಬಂದಿದರಿ. ನಮ್ಮ ಹಳೆಕಾಲವ ಸಂಕೇತಗಳು ಹಾಗೆಯೇ ಇವೆ. ಟವನ್ ಪ್ಲಾನಿಂಗ್ ನವರೂ ಸಹ ಹೊರಗಡೆ ಇರಬೇಕೆಂದು ಹೇಳಿದ್ದಾರೆ ನೂರಾರು ಎಕರೆ ಜಮೀನು ಮದ್ಯದಲ್ಲಿದೆ. ಮಾನ್ಯ ಮಂತ್ರಿಗಳು ಹೇಳಬಹುದು ಇದು ಲಂಗ್ಸ್‌ಸ್ಪೇಸ್ ಇದೆ ಎಂದು ಒಪ್ಪಿ ಕೊಳ್ಳುವುದಿಲ್ಲ. ಆದರ ಪಕ್ಕದಲ್ಲಿಯೇ ಫಾಲ್ಟ್ ಗ್ರೌಂಡ್ ಇದೆ. ಆಕಡೆ ಬೆಂಗಳೂರು ಪ್ಯಾಲೆಸ್ ಇದೆ. ಸುತ್ತ ಮುತ್ತಲಿರುವ ವಾತಾವರಣವನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಪ್ಯಾಲೆಸ್‌ನಲ್ಲಿ ಇರತಕ್ಕ ಗಾರ್ಡನ್ಸ್, ನೂರಾರು ವರ್ಷದಿಂದ ಬೆಳೆಸಿರತಕ್ಕದ್ದಾಗಿದೆ. ರೇಸ್ ಕೋರ್ಸ್ ಮತ್ತು ಫಾಲ್ಟ್ ಗ್ರೌಂಡ್ ಏನು ಇದೆ ಅಲ್ಲಿ ಮಾಡ್ರನ್ ಬಿಸಿನೆಸ್ ಕಾಂಪ್ಲೆಕ್ಸ್ ಮಾಡಿದರೆ ಏನು ತೊಂದರೆ ಯಾಗುವುದಿಲ್ಲ. ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು ೬೦ × ೧೦೦ ಅಡಿಗೆ, ೮೦ × ೧೨೦ ಅಡಿಗೆ ೧೦ ಸಾವಿರ ೧೫ ಸಾವಿರಕ್ಕೆ ಸೈಟು ಗಳು ಸಿಕ್ಕುತ್ತಿತ್ತು. ಈಗ ಲಕ್ಷಕ್ಕೆ ಹೋಗುತ್ತಿದೆ. ಒಂದು ಲಕ್ಷಕೊಟ್ಟರೂ ಸೈಟು ಸಿಕ್ಕುತ್ತಿಲ್ಲ. ಹಿಂದೆ ರೇಸ್ ಕೋರ್ಸ್ ಮತ್ತು ಸೆಂಟ್ರಲ್ ಜೈಲನ್ನು ಸ್ಥಳಾಂತರಗೊಳಿಸಲು ''ಜಕ್ಕೂರನ್ನು'' ಪ್ರದೇಶವನ್ನು ಆಯ್ಕೆಮಾಡಿದರು. ಆದನ್ನು ಅಲ್ಲಿಗೆ ಸ್ಥಳಾಂತರಮಾಡಿದರೆ ಏನು ತೊಂದರೆಯಾಗುವುದಿಲ್ಲ ಮಂದ್ರಾಸ್

ನಲ್ಲಿ ಗಂಡಿ ಊರ ಮಧ್ಯದಲ್ಲಿ ಇದ್ದುದನ್ನು ಹೊರಗಡೆ ಇಟ್ಟಿದ್ದಾರೆ. ಮಂತ್ರಿ ರೇಸ್ ಪ್ರಾಹಿಬಿಷನ್ ತೆಗೆದುಬಿಟ್ಟರೂ, ಆದುದರಿಂದ ಜನ ಇಲ್ಲಿಗೆ ಬರುವುದಕ್ಕೆ ಶುರು ಮಾಡಿರುತ್ತಾರೆ. ಇದರಿಂದ ನಮಗೆ ಅಪಾಯ ಒದಗಬಹುದು. ಕಷ್ಟಬರಬಹುದು. ಈಗ ಇರತಕ್ಕ ೨೦ ಲಕ್ಷ ಜನಕ್ಕೆ ಸೌಲಭ್ಯಗಳನ್ನು ಒದಗಿಸವುದಕ್ಕೆ ಕಷ್ಟವಾಗಿರುವಾಗ ಎಕ್ಸ್‌ಟ್ರಾಪಾಪ್ಯುಲೇಶನ್‌ಗೆ ಏನು ಮಾಡುವುದು. ರೇಸ್‌ಕೋರ್ಸ್ ಹೊರಗಡೆಗೆ ಸ್ಥಳಾಂತರಗೊಳಿಸಬೇಕು ಎನ್ನುವ ಸಂದರ್ಭದಲ್ಲಿ ಅಲ್ಲಿ ಪ್ರತಿ ದಿವಸ ಬಹಳ ಬದಲಾವಣೆಗಳು ನಡೆಯುತ್ತಿವೆ. ರೇಸ್ ನಡೆಯಂತ್ತಿರುವಾಗ ಕಾಣಿಸದಹಾಗೆ ಬಹಳ ಎತ್ತರಕ್ಕೆ ಗೋಡೆಯನ್ನು ನಿರ್ಮಿಸಿದ್ದಾರೆ. ದುಡ್ಡಿದ್ದವರು ಸಾಹುಕಾರರು ಒಳಗಡೆಹೋಗಿ ನೋಡಬಹುದು ಅದನ್ನು ಒಪ್ಪಿಕೊಳ್ಳುತ್ತೇನೆ. ಅಲ್ಲದೆ ಒಳಗಡೆ ಎಷ್ಟೋ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ ಸ್ಟೀವರ್ಡ್ ಕುದುರೆಗಳನ್ನು ಹೊರಗಡೆ ಇಡುತ್ತಿದ್ದರು. ಈಗ ಒಳಗಡೆ ಅಂಡರ್ ಗ್ರೌಂಡ್ ಮಾಡಿ ಸುಮಾರು ೧೦೦೭ ಕುದುರೆಗಳನ್ನು ಇಡುವ ವ್ಯವಸ್ಥೆ ಸಹಾ ಮಾಡಿಕೊಂಡಿರುತ್ತಾರೆ ನೀರಿನ ಅನುಕೂಲಕ್ಕಾಗಿ ಬೋರ್‌ವೆಲ್ ಹಾಕಿಕೊಂಡಿದ್ದಾರೆ. ಒಂದು ವರ್ಷದ ಹಿಂದೆ ಕೇಳಿರಬಹುದು ರೇಸಿಂಗ್ ಹಾರ್ಸ್ ಕಟ್ಟಿರತಕ್ಕ ಲಾಯಕ್ಕೆ ಬೆಂಕಿ ಬಿದ್ದು ಕುದುರೆಗಳು ಸತ್ತು ಹೋಗಿವೆ. ಆದ್ದರಿಂದ ಪೈರ್‌ಬ್ರಿಗೇಡನ್ನು ಪಕ್ಕದಲ್ಲಿಯೇ ಇಟ್ಟುಕೊಂಡಿದ್ದಾರೆ. ಇಂಥ ಭಯ ಇದ್ದರೂ ಅಪಾಯದ ಮಧ್ಯದಲ್ಲಿ ಎತಕ್ಕೆ ಇಟ್ಟುಕೊಳ್ಳಬೇಕು. ಹೊರಗಡೆ ಏತಕ್ಕೆ ಹಾಕಬಾರದು ಎಂದು ನನ್ನ ಭಾವನೆ. ಈಗಲಾದರೂ ಅದನ್ನು ಹೊರಗೆ ಇಡಬೇಕು ಎನ್ನುವುದೇ ನನ್ನ ಅಭಿಪ್ರಾಯ. ಎಷ್ಟೇ ಆದಾಯಬರಲಿ ಅದರಿಂದ ಎಷ್ಟು ಕಷ್ಟಬರಲಿ ಸ್ಥಳಾಂತರಗೊಳಿಸಲು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಒಂದು ಕಮಿಟಿಯನ್ನು ಮಾಡಿ ರೇಸ್ ಕೋರ್ಸ್ ಇಲ್ಲೇ ಇಟ್ಟುಕೊಳ್ಳಬೇಕೆ, ಅಥವಾ ಕೂಡದೆ ಎನ್ನುವುದನ್ನು ಕೂಲಂಕಶವಾಗಿ ಪರಿಶೀಲನೆ ಮಾಡಲಿ. ತಪ್ಪಾಗೆ ಗೊತ್ತಿರುವಹಾಗೆ ಕಾಲೇಜುಗಳು ಪಕ್ಕದಲ್ಲೇ ಇರುವುದರಿಂದ ವಿದ್ಯಾರ್ಥಿಗಳು ಕಾಲೇಜಿಗೆ ಹೋಗದಿರುವುದಿಲ್ಲ. ಪಟ್ಟಣ ಬೃಹದ್ಕಾರವಾಗಿ ಬೆಳೆಯುತ್ತಿದೆ. ಹೆಗಾದರೂ ಮಾಡಿ ಸಾಹುಕಾರನಾಗಬೇಕೆಂಬ ಹಂಬಲದಿಂದ ಜನರು ಇರುತ್ತಾರೆ. ಹೋಟೆಲಿನಲ್ಲಿ ಬೇಕಾದಷ್ಟು ಇಮ್‌ಮೊರಲ್ ಟ್ರಾಫಿಕ್ ನಡೆಯುತ್ತಿದೆ. ಇಂಥ ವಿಷಯಗಳು ಕಂಡು ಕಂಡು ಮಧ್ಯೆ ಏತಕ್ಕೆ ಇಟ್ಟುಕೊಳ್ಳಬೇಕು, ಸ್ಟೀವರ್ಡ್‌ಗಳು ಎಷ್ಟೇ ಪ್ರಭಾವಿಶಾಲಿಗಳಾಗಿರಲಿ ಅವರ ವಾದಕ್ಕೆ ಮಣಿಯ ಬಾರದು. ಇದನ್ನು ಹೊರಗಡೆ ಇಡಬೇಕು ಎನ್ನುವುದರ ಬಗ್ಗೆ ದೊಡ್ಡ ನಿಲುವನ್ನು ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಇದರಿಂದ ಹೋಟೆಲ್‌ಗಳು, ಅಂಗಡಿಗಳು ಬರುತ್ತದೆ. ಸುತ್ತು ವ್ಯಾಪಾರ ಬೆಳೆಯಲು ಸಹಾಯವಾಗಬಹುದು ಸಾರ್ವಜನಿಕರ ದೃಷ್ಟಿಯಿಂದ ರೇಸ್ ಕೋರ್ಸನ್ನು ಸ್ಥಳಾಂತರ ಮಾಡಿಯೇ ತೀರಬೇಕು. ಸ್ವಾಮಿ, ತಮಗೆ ಇನ್ನೊಂದು ವಿಷಯ ಗೊತ್ತಿರಬಹುದು. ಸಿಂಗಪುರ, ಮಲೆಯ, ಅರ್ಜೆಂಟೈನಾ ಮುಂತಾದ ಕಡೆಗಳಲ್ಲಿ ವಾರಕ್ಕೆ ಒಂದು ಸಾರಿ ಈ ರೇಸನ್ನು ಆಡುತ್ತಾರೆ. ಆದರೆ ಇಲ್ಲಿ ವಾರಕ್ಕೆ ೪-೫ ಸಾರಿ ಆಡುತ್ತಾರೆ. ಬೊಂಬಾಯಿಯಲ್ಲಿ ರೇಸ್ ನಡೆಯುತ್ತದೆ ಎಂದರೆ, ಮದ್ರಾಸ್‌ನಲ್ಲಿ ರೇಸ್ ನಡೆಯುತ್ತದೆ ಎಂದರೆ ಬೆಂಗಳೂರಿನಲ್ಲೇ ಕೂತುಕೊಂಡು ಪಂದ್ಯಗಳನ್ನು ಕಟ್ಟುತ್ತಾರೆ. ಇನ್ನೂ ಅನೇಕ ರೀತಿಯಲ್ಲಿ ಈ ಬೆಟ್ಟಿಂಗ್ ಇರುತ್ತದೆ. ಇದರಿಂದ ಏನಾಗಿದೆ ಎಂದರೆ ಬೇಕಾದಷ್ಟು ಕುಟುಂಬಗಳು ನಾಶವಾಗುತ್ತಿವೆ. ಆದುದರಿಂದ ಈ ರೇಸ್ ಕೋರ್ಸನ್ನು ಸಿಟಿಯಿಂದ ಹೊರಕ್ಕೆ ಹಾಕಿಬಿಟ್ಟರೆ ಬಹಳ ಅನುಕೂಲವಾಗುತ್ತದೆ. ರೇಸ್ ಆಡುವವರ ಸಂಖ್ಯೆ ಇದರಿಂದ ಕಡಿಮೆ ಆಗುತ್ತಾದೆಂದು ಹೇಳಬಹುದು.

ಇನ್ನೊಂದು ಮುಖ್ಯ ವಿಚಾರವೆಂದರೆ ಟ್ರಾಫಿಕ್. ಅದರಲ್ಲೂ ರೇಸ್ ನಡೆಯುವ ದಿವಸ ನೂರಾರು ಜನ ರಸ್ತೆಯಲ್ಲಿ ತುಂಬಾ ಓಡಾಡುತ್ತಾ ಇರುತ್ತಾರೆ. ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಜಾಗವೇ ಸಿಕ್ಕುವುದಿಲ್ಲ. ಟ್ರಾಫಿಕ್ ಜಾಮ್ ಆಗುತ್ತದೆ. ರೇಸ್‌ನಲ್ಲಿ ದುಡ್ಡು ಬಂದವನು ಸಂತೋಷವಾಗಿ ಹೊರಕ್ಕೆ ಬರುತ್ತಾನೆ. ದುಡ್ಡು ಸೋತವನು ಮುಖವನ್ನು ತೊಳೆದುಕೊಂಡು ಹೊರಕ್ಕೆ ಬರುತ್ತಾನೆ. ಈ ರೇಸ್ ಹಿಂದಿನಿಂದಲೂ ಅಂದರೆ ಅನೂಚೀನವಾಗಿ ನಡೆದುಕೊಂಡು ಬಂದಿರುವುದಾದರೂ ಇದನ್ನು ಸ್ಥಳಾಂತರಪಡಿಸುವುದರಿಂದ ಏನೂ ತೊಂದರೆಗಳಾಗುವುದಿಲ್ಲ. ಈ ಕಾರಣಗಳಿಂದ ಇದನ್ನು ಸಿಟಿಯಿಂದ ಹೊರಗಡೆ ಹಾಕಬೇಕೆಂದು ಮತ್ತೊಮ್ಮೆ ಒತ್ತಿ ಹೇಳಬಯಸುತ್ತೇನೆ. ಅಲ್ಲದೆ ಇದರಿಂದ ಹಿತೇ ಬಂದರೂ ಕೂಡ ಈ ರೇಸ್ ಕೋರ್ಸನ್ನು ಇಲ್ಲಿಂದ ಸ್ಥಳಾಂತರಿಸಲೇ ಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನನಗೆ ಕಾಲಾವಕಾಶ ಹೆಚ್ಚು ಇಲ್ಲದೇ ಇರುವುದರಿಂದ ಮತ್ತು ನನ ಮಾನ್ಯ ಮಿತ್ರರು ಅನೇಕರು ಮಾತನಾಡಬೇಕಾಗಿರುವುದರಿಂದ ಇಷ್ಟು ಮಾತುಗಳನ್ನಾಡಲು ನನಗೆ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P. M.

† ಶ್ರೀ ಎಂ. ಎಸ್. ಕೃಷ್ಣನ್.—(ಮಲ್ಲೇಶ್ವರಂ)—ಸನ್ಮಾನ್ಯ ಸಭಾಧ್ಯಕ್ಷರೆಯವರೆ, ಮಾನ ನಾಯ್ಡುರವರು ತಂದಿರತಕ್ಕಂಥ ನಿರ್ಣಯದ ಬಗ್ಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ನಿರ್ಣಯದಲ್ಲಿ ಮುಖ್ಯವಾಗಿ ಎರಡು ಅಂಶಗಳಿವೆ. ಮೊದಲನೆಯದು ಬೆಂಗಳೂರು ರೇಸ್ ಕೋರ್ಸನ್ನು ಸ್ಥಳಾಂತರಿಸಬೇಕು, ಎರಡನೆಯದು ಆ ಜಾಗವನ್ನು ಒಂದು ಅಂತರರಾಷ್ಟ್ರೀಯ ಮಾದರಿಯಲ್ಲಿ ಒಂದು ವ್ಯಾಪಾರ ಸ್ಥಳವನ್ನಾಗಿ ಮಾರ್ಪಾಡು ಮಾಡಬೇಕು ಎಂದು ಇದು ನಮ್ಮ ಮಾನ್ಯ ಸ್ನೇಹಿತರು ಕೇಳಿರತಕ್ಕಂಥದ್ದು

ಮೊದಲನೆಯದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಏನೂ ಇಲ್ಲ. ಏಕೆಂದರೆ ನಾನೂ ಸಹ ಬೆಂಗಳೂರು ನಗರದಲ್ಲಿ ಸುಮಾರು ೩೦-೪೦ ವರ್ಷಗಳಿಂದಲೂ ಕೂಡ ಇರುವವನು. ಮಾನ್ಯ ನಾಯ್ಡು ಅವರೂ ಕೂಡ ಇಲ್ಲಿ ಬಹಳ ವರ್ಷಗಳಿಂದಲೂ ಇರುವವರು. ಅವರು ಈ ರೇಸ್ ಕೋರ್ಸ್‌ನ ಚರಿತ್ರೆಯನ್ನು ಬಹಳ ವಿಶದವಾಗಿ ಹೇಳಿದ್ದಾರೆ. ಮೊದಲು ಈ ರೇಸ್‌ಕೋರ್ಸ್ ಶೂಲೆ ಹತ್ತಿರ ಇತ್ತು. ಆಮೇಲೆ ಇದನ್ನು ಅಲ್ಲಿಂದ ಇಲ್ಲಿಗೆ ವರ್ಗಾವಣೆ ಮಾಡಿದ್ದಾರೆ. ಈ ರೇಸ್ ಬರುವುದಕ್ಕೆ ಕಾರಣ ಇವೆ. ಇದು ಒಂದು ಶ್ರೀಮಂತರ ಆಟ ಆಗಿತ್ತು. ಸಾಮಾನ್ಯ ಜನರ ಆಟ ಇದಲ್ಲ. ಅಲ್ಲದೆ ಸಾಮಾನ್ಯ ಜನರು ಇದಕ್ಕೆ ಹೋಗುತ್ತಲೂ ಇರಲಿಲ್ಲ. ಈಗ ದಿನೇದಿನೇ ಬೆಂಗಳೂರು ನಗರ ಬೆಳೆಯುತ್ತಾ ಇದೆ ಮೊದಲು ಶ್ರೀಮಂತರು ಮತ್ತು ಮಧ್ಯಮ ವರ್ಗದ ಜನರು ಈ ರೇಸ್‌ಗೆ ಹೋಗುತ್ತಿದ್ದರು. ಇತ್ತೀಚೆಗೆ ಏನಾಗಿದೆ ಎಂದರೆ ಕಾರ್ಮಿಕರೂ ಕೂಡ ಬಹಳವಾಗಿ ಹೋಗಲು ಪ್ರಾರಂಭಿಸಿದ್ದಾರೆ. ಇವರೆಲ್ಲಾ ಹೋಗುತ್ತಾ ಇರುವುದರಿಂದ ಇದು ಒಳ್ಳೆಯ ಆಟ, ಜೂಜು ಆಡಬೇಕು ಎನ್ನುವ ಅಭಿಪ್ರಾಯಕ್ಕೆ ನಾನು ಒರುವುದಕ್ಕೆ ತಯಾರಾಗಿಲ್ಲ. ಕುದುರೆ ಜೂಜಿನ ಪಂದ್ಯ ಸರಿಯಾದುದಲ್ಲ, ನ್ಯಾಯವಾದುದಲ್ಲ. ಆದುದರಿಂದ ಇದನ್ನು ಆದಷ್ಟು ಬೇಗ ಇದನ್ನು ನಿಲ್ಲಿಸಿದರೆ ಒಳ್ಳೆಯದು. ನನ್ನ ಅಭಿಪ್ರಾಯವೂ ಕೂಡ ಮಾನ್ಯ ನಾಗನ್ನ ನವರ ಅಭಿಪ್ರಾಯದಂತೆಯೇ. ಏಕೆಂದರೆ ಅವರಿಗೆ ಇದರಲ್ಲಿ ಬಹಳ ಅನುಭವ ಇದೆ ಅವರು ಜೂಜಿನಲ್ಲಿ ಬಹಳವಾಗಿ ಕಳೆದುಕೊಂಡಿದ್ದಾರೆ. ಆದರೆ ನನಗೆ ಆದರ ಅನುಭವ ಇಲ್ಲ. ಅಲ್ಲದೆ ನಾನಂತೂ ಎಂದೂ ಜೂಜಿಗೆ ಹೋಗಿಲ್ಲ. ಈ ಜೂಜಾಟವೇ ಬೇಡವೆಂದು ನನ್ನ ಅಭಿಪ್ರಾಯ. ಇದನ್ನು ನಾನು ಹೇಳುವುದಕ್ಕೆ ಹೋದರೆ ನಮಗೆ ಬರುತ್ತಾ ಇರುವ ವರಮಾನ ತಪ್ಪಿಹೋಗುತ್ತದೆಂದು ಸರ್ಕಾರದವರು ಹೇಳಬಹುದು ಬೆಟ್ಟಿಂಗ್ ಟ್ಯಾಕ್ಸ್, ಇನ್ನಿತರ ಟ್ಯಾಕ್ಸ್‌ಗಳು ತಪ್ಪಿಹೋಗುತ್ತವೆಂದು ಕಾರ್ಪೊರೇಷನ್‌ನವರು ಹೇಳಬಹುದು. ಇದನ್ನು ತಪ್ಪಿಸಬೇಕೆಂದು ನನ್ನ ಅಭಿಪ್ರಾಯವಲ್ಲ; ಮತ್ತು ಇದನ್ನು ತಪ್ಪಿಸುವುದೂ ಬೇಡ. ಇದರಿಂದ ಸಾಮಾನ್ಯ ಜನಗಳಿಗೆ ತೊಂದರೆಯಾಗುತ್ತಿರುವುದರಿಂದ ಇದನ್ನು ಇಲ್ಲಿಂದ ವರ್ಗಾವಣೆ ಮಾಡುವುದೂ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಬೆಂಗಳೂರಿನ ನಿರ್ಮಾಪಕರಾದ ಕೆಂಪೇಗೌಡರು ನಗರದ ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಕೆಂಪೆಗೌಡ ಶಿಖರಗಳನ್ನು ಕಟ್ಟಿಸಿದರು. ಇವತ್ತು ಆ ಶಿಖರಗಳನ್ನು ಬಿಟ್ಟು ಳ ಪಟ್ಟು ಮುಂದೆ ಈ ಬೆಂಗಳೂರು ನಗರ ಬೆಳೆದುಕೊಂಡು ಹೋಗಿದೆ. ಸುಮಾರು ೨೨ ಲಕ್ಷ ಜನ ಇಲ್ಲಿದ್ದಾರೆ ಕೈಗಾರಿಕೆಗಳು ಬೃಹದಾಕಾರವಾಗಿ ಬೆಳೆದಿವೆ. ವಾಹನ ಸಂಚಾರ ಅತಿಯಾಗಿ ಹೆಚ್ಚುತ್ತಿದೆ, ಹೀಗಿರುವಾಗ ನಗರದ ಮಧ್ಯ ಭಾಗದಲ್ಲಿ ಈ ರೇಸ್ ಕೋರ್ಸ್ ಇದ್ದರೆ ನಗರದ ಅಂದಚೆಂದಕ್ಕೇ ಅಲ್ಲದೆ ಇನ್ನೂ ಅನೇಕ ವಿಷಯಗಳಲ್ಲಿ ತೊಂದರೆ, ತೊಡಕುಗಳ ಬರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಮಾನ್ಯ ನಾಯ್ಡುರವರು ವಾಹನ ಸಂಚಾರದ ಬಗ್ಗೆ ಒಂದು ಮಾತು ಹೇಳಿದರು. ಈಗ ಸರ್ಕಾರದವರು ಈ ಕುದುರೆ ಜೂಜು ವರ್ಷದಲ್ಲಿ ೬ ತಿಂಗಳು ನಡೆಯಬಹುದೆಂದು ತೀರ್ಮಾನಮಾಡಿದ ಮೇಲೆ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಬಹಳ ಕಷ್ಟವಾಗುತ್ತಿದೆ. ರಿಂಗ್‌ವುಡ್ ಸರ್ಕಲ್‌ನಿಂದ ಮಲ್ಲೇಶ್ವರಂಗೆ ಹೋಗ ಬೇಕಾದರೆ ಬಹಳ ಕಷ್ಟವಾಗುತ್ತಿದೆ. ಆದರಲ್ಲೂ ರೇಸ್ ಬಿಟ್ಟ ಸಮಯದಲ್ಲಿ ಹೇಳತೀರದ ಕಷ್ಟವಾಗುತ್ತದೆ. ಇಷ್ಟೇ ಅಲ್ಲ, ಈ ರೇಸ್ ಕೋರ್ಸ್ ನಗರದ ಮಧ್ಯ ಭಾಗದಲ್ಲಿರುವುದರಿಂದ ಜೂಜಾಡುವ ಪ್ರವೃತ್ತಿಯನ್ನು ನಾವು ಏನು ಕಡಿಮೆ ಮಾಡಬೇಕೆಂದು ಹೊರಟ್ಟಿದ್ದೇವೆಯೋ ಅದಕ್ಕೆ ಬದಲಾಗಿ ಈ ಜೂಜಾಟದ ವ್ಯವೃತ್ತಿಯನ್ನು ಜಾಸ್ತಿಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ನನಗೆ ತಿಳಿದಿರುವಂತೆ ಪರದೇಶಗಳಲ್ಲಿ ಈ ರೇಸ್ ಕೋರ್ಸ್‌ಗಳಿಗೆ ನಿಬಂಧನೆಯನ್ನು ಹಾಕಿ ನಗರದ ಹೊರಗಡೆ ಇಟ್ಟಿರುತ್ತಾರೆ. ಮಾಸ್ಕೋನಲ್ಲಿ ಕೂಡ ಈ ರೇಸ್ ಇದೆ. ಆದರೆ ಈ ಜೂಜಿನ ತರಹ ಅಲ್ಲಿ ಇಲ್ಲ. ಅಲ್ಲಿ ಬೆಟ್ಟಿಂಗ್ ಇಲ್ಲ. ಅವರು ಗೆದ್ದವರಿಗೆ ಪ್ರೈಸ್‌ಗಳನ್ನು ಕೊಡುತ್ತಾರೆ. ಆದರೆ ಫ್ರಾನ್ಸ್ ದೇಶದಲ್ಲಿ, ಜರ್ಮನಿಯಲ್ಲಿ ಇನ್ನೂ ಇತ್ಯಾದಿ ಕಡೆಗಳಲ್ಲಿ ಈ ರೇಸ್ ನಡೆಯುತ್ತದೆ ಅಲ್ಲಿ ಬೆಟ್ಟಿಂಗ್ ಇದೆ. ಹೋದಸಾರಿ ಹೋಗಿ ನೋಡಿದಾಗ ಫ್ರಾನ್ಸ್‌ನ ಪ್ಯಾರಿಸ್ ನಗರದ ಮಧ್ಯಭಾಗದಲ್ಲಿ ಒಂದು ರೇಸ್ ಕೋರ್ಸ್ ಇದೆ. ಆದನ್ನು ಯಾರೂ ಕೂಡ ಈಗ ಉಪಯೋಗಿಸುತ್ತಾ ಇಲ್ಲ. ಪ್ಯಾರಿಸ್ ರೇಸ್ ಒಂದಾನೊಂದು ಕಾಲದಲ್ಲಿ ಅಂತರ್ ರಾಷ್ಟ್ರೀಯ ರೇಸ್ ಆಗಿದ್ದುದು ಇವತ್ತು ಅದು ಅನುಪಯುಕ್ತವಾಗಿದೆ. ಅವರು ಹೊಸದೊಂದು ರೆ ಸ್ ಕೋರ್ಸ್ ಮಾಡ

ಬೇಕೆಂದು ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಆದರೆ ಅದನ್ನು ಎಲ್ಲಿ ಕೊಡುತ್ತಾರೋ ಗೊತ್ತಿಲ್ಲ. ಅಷ್ಟು ಸುಂದರವಾಗಿ ಇದ್ದಂಥ ರೇಸ್ ಕೋರ್ಸ್‌ನಲ್ಲಿ ಇಂದು ಮರ, ಗಿಡಗಳು ಬೆಳೆದುಕೊಂಡಿವೆಯೆಂದು ಕೇಳಿದ್ದೇನೆ. ಹೀಗೆ ನೈತಿಕ ದೃಷ್ಟಿಯಿಂದ, ತತ್ವದ ಆಧಾರದ ಮೇಲೆ ನೋಡುವುದಾದರೆ ಈ ಎಲ್ಲ ದೃಷ್ಟಿಯಿಂದಲೂ ಕೂಡ ಈ ರೇಸ್‌ಕೋರ್ಸ್‌ನ್ನು ನಗರದಿಂದ ಹೊರಗಡೆ ವರ್ಗಾವಣೆ ಮಾಡುವುದು ಅತಿ ಮುಖ್ಯವೆಂದು ನಾನು ಹೇಳಬಯಸುತ್ತೇನೆ.

ಇದನ್ನು ವರ್ಗಾವಣೆ ಮಾಡುವುದಕ್ಕೆ ಅತಿ ಮುಖ್ಯವಾದಂಥ ಇನ್ನೊಂದು ಕಾರಣವೆಂದರೆ, ಈ ರೇಸ್ ಕೋರ್ಸ್‌ನ ಸುತ್ತಮುತ್ತಲೂ ಕಾಲೇಜುಗಳಿವೆ. ಇನ್ನೊಂದು ಭಾಗದಲ್ಲಿ ಸೆಂಟ್ರಲ್ ಜೈಲ್ ಇದೆ. ಆ ಜೈಲನ್ನೂ ಕೂಡ ನಗರದಿಂದ ಹೊರಗಡೆಗೆ ವರ್ಗಾವಣೆ ಮಾಡಬೇಕೆಂದು ಸರ್ಕಾರದ ಮೇಲೆ ಪ್ರಬಲವಾದ ಒತ್ತಾಯವನ್ನು ಅನೇಕರು ತಂದಿದ್ದಾರೆ. ಆದರೂ ಕೂಡ ಅದನ್ನೂ ಮಾಡಿಲ್ಲ. ಸರ್ಕಾರದವರು ಇದನ್ನು ಇನ್ನೂ ಯೋಚನೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಈಗ ಮಹಾರಾಣಿ ಕಾಲೇಜಿಗೆ ಕಟ್ಟಡ ಸಾಕಾಗದೇ ಇರುವುದರಿಂದ ಕಾಲೇಜು ಕಟ್ಟಡವನ್ನು ಎಕ್ಸ್‌ಟೆಂಡ್ ಮಾಡಬೇಕಾಗಿದೆ ಆದರೆ ಅದಕ್ಕೆ ಜಾಗ ಇಲ್ಲ. ಇಂಥ ಪರಿಸ್ಥಿತಿ ಇರುವಾಗ ರೇಸ್‌ಕೋರ್ಸ್ ಆ ಸ್ಥಳದಲ್ಲಿ ಇರುವುದು ಸರಿಯಾದುದಲ್ಲ. ಆದುದರಿಂದ ಇದನ್ನು ಶಿಫ್ಟ್ ಮಾಡಬೇಕಾದುದು ಒಳ್ಳೆಯದೆಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ವಾಸ್ತವ ಇದನ್ನು ಶಿಫ್ಟ್ ಮಾಡಿದರೂ ಸಹ ಇದರಿಂದ ಬರತಕ್ಕ ಎರಮಾನವು ಏನೂ ಕಡಿಮೆ ಆಗುವುದಿಲ್ಲವೆಂದು ನನ್ನ ಅಭಿಪ್ರಾಯ. ಒಂದು ಪಕ್ಷ ಬೆಂಗಳೂರು ನಗರದ ಹೊರ ವಲಯದಲ್ಲಿ ಈ ರೇಸ್ ಕೋರ್ಸ್ ಮಾಡಿದರೆ ಅದಕ್ಕೆ ಹೋಗಬೇಕೆಂದಿರುವ ಜನ ಒಂದು ಮೈಲಿ ಅಲ್ಲ ೧೦ ಮೈಲಿ ದೂರ ಹಾಕಿದರೂ ಹೋಗೇ ಹೋಗುತ್ತಾರೆ. ಯಾವ ಕುದುರೆ ಗೆಲ್ಲುತ್ತದೆ, ಅದರ ಜಾತಿ ಯಾವುದು, ಇತ್ಯಾದಿ ಲೆಕ್ಕಾಚಾರ ಹಾಕುವ ಜನ ಇದ್ದಾರೆ. ಇವರು ಎಲ್ಲಿದ್ದರೂ ಹೋಗುತ್ತಾರೆ. ಉದಾಹರಣೆಗೆ ಹೇಳುವುದಾದರೆ ಇಲ್ಲಿಗೆ ಮದ್ರಾಸ್‌ನಿಂದ ಬರುತ್ತಾರೆ, ಬೊಂಬಾಯಿಯಿಂದ ಬರುತ್ತಾರೆ, ಶ್ರೀನಗರದಿಂದ ಬರುತ್ತಾರೆ, ಅನೇಕ ಎಂ. ಎಲ್. ಎ. ಗಳು ಎಂ. ಪಿ. ಗಳು, ಮಿನಿಸ್ಟರ್‌ಗಳು ಹೀಗೆ ಎಲ್ಲರೂ ಬರುತ್ತಾರೆ. ನಗರದಿಂದ ೫–೬ ಮೈಲಿ ದೂರದಲ್ಲಿ ರೇಸ್ ಕೋರ್ಸ್ ಮಾಡಿದರೆ ಯಾರೂ ಹೋಗುವುದಿಲ್ಲ ಎಂದು ಹೇಳುವುದು ಸರಿಯಾದುದಲ್ಲ. ಇದರಿಂದ ವರಮಾನ ಏನೂ ಕಡಿಮೆಯಾಗುವುದಿಲ್ಲ. ಇನ್ನೂ ಹೆಚ್ಚಾಗುತ್ತದೆಂದು ಹೇಳಬಯಸುತ್ತೇನೆ.

ಒಂದು ಪಕ್ಷ ಹೊಸ ರೇಸ್‌ಕೋರ್ಸನ್ನು ಕಟ್ಟಿಸಿದರೆ ಅಂತರಾಷ್ಟ್ರೀಯ ಸ್ಟಾಂಡರ್ಡ್‌ನಲ್ಲಿ ಕಟ್ಟಿಸುತ್ತೀರಿ. Anything constructed in our Country is of International standard. ಇಂಟರ್ ನ್ಯಾಷನಲ್ ಸ್ಟಾಂಡರ್ಡ್‌ನಲ್ಲಿ ಕಟ್ಟಿಸಿ ಅದಕ್ಕೆ ಬೇಕಾದ ಅನುಕೂಲ ಮಾಡಿಕೊಡಿ. ಲಕ್ಷಾಂತರ ರೂಪಾಯಿ ಖರ್ಚುಮಾಡಿದರೆ ವರಮಾನ ಬರುತ್ತದೆ ತೆಗೆದುಕೊಳ್ಳುತ್ತೀರಿ. ಸುಸಜ್ಜಿತವಾಗಿ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಬರುವ ವರಮಾನ ಕಡಿಮೆಯಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ ರೇಸ್‌ಕೋರ್ಸ್‌ನ್ನು ಹೊರಗಡೆಗೆ ಶಿಫ್ಟ್ ಮಾಡುವುದು ಇದರ ಬಗ್ಗೆ ಮಾನ್ಯ ಕೆ. ಆರ್. ಎಸ್. ನಾಯ್ಡು ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇಂಟರ್‌ನ್ಯಾಷನಲ್ಲಿ ಬಿಸಿನೆಸ್ ಕಾಂಪ್ಲೆಕ್ಸ್, ವ್ಯಾಪಾರಸ್ಥರಿಗೆ ಆ ಜಾಗ ಕೊಡಬೇಕು ಎಂದು ಹೇಳಿದರೆ. ಗುಪ್ತಾರವರು, ಹಿರಾಲಾಲ್, ಹುಕುಂಚಂದ್ ಅವರು ಇಲ್ಲಿ ಬಂದು ಕಟ್ಟಿಸಿದರೆ ಇರುವಂಥ ಸ್ಥಳ ಅನ್ಯಾಯವಾಗುತ್ತದೆ, ಜನಗಳಿಗೆ ಅನುಕೂಲವಾಗುವುದಿಲ್ಲ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈಗ ಬೆಂಗಳೂರು ನಗರದಲ್ಲಿ ಉಳಿದಾಡುವುದಕ್ಕೆ ಜಾಗ ಇಲ್ಲ ; ಲಂಗ್ ಸ್ಪೇಸ್ ಇಲ್ಲ. ರೇಸ್‌ಕೋರ್ಸ್‌ನಲ್ಲಿ ಕಟ್ಟದೆ ಇರತಕ್ಕ ಜಾಗದಲ್ಲಿ ಮಾತ್ರ ಸ್ವಲ್ಪ ಲಂಗ್ ಸ್ಪೇಸ್ ಇದೆ. ಗಾಲ್ಫ್ ಕ್ಲಬ್‌ನಲ್ಲಿ ಇದೆ. ಅಲ್ಲಿಗೆ ಶ್ರೀಮಂತರು ಮಾತ್ರ ಹೋಗುವುದಕ್ಕೆ ಸಾಧ್ಯ. ಕೆಲವು ಮಂತ್ರಿಗಳು ಸ್ಪೆಷಲ್ ಪರ್ಮಿಷನ್ ತೆಗೆದುಕೊಂಡು ಬೆಳಿಗ್ಗೆ ಹೊತ್ತು ಸುತ್ತಾಡುವುದಕ್ಕೆ ಹೋಗುತ್ತಾರೆ. ಶ್ರೀಮಾನ್ ಘೋರ್ಪಡೆಯವರನ್ನು ಸೇರಿಸಿಕೊಂಡು. ನಮ್ಮಂಥ ಸಾಮಾನ್ಯ ಜನ ಒಳಗಡೆ ಹೋಗುವ ಹಾಗಿಲ್ಲ, ಅದರ ಹತ್ತಿರ ಸೇರುವ ಹಾಗಿಲ್ಲ. ಅಶೋಕ ಹೋಟೆಲ್‌ಗೆ ೯೯ ವರ್ಷಕ್ಕೆ ಲೀಸ್ ಕೊಟ್ಟಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ—ಲಂಗ್‌ಸ್ಪೇಸ್ ಎಲ್ಲರಿಗೂ ಅನುಕೂಲವಾಗುತ್ತದೆ.

SRI M.S. KRISHNAN.—Yes. There must be space again where you can have gardens etc. ಕಬ್ಬನ್ ಪಾರ್ಕ್ ಇದೆ. ಲಾಲ್‌ಬಾಗ್ ಇದೆ. ಆದರೆ ಸಿಟಿ ಸೆಂಟರ್‌ನಲ್ಲಿ ಸ್ಥಳ ಇರುವುದು ಇದು ಒಂದೆ ಆ ಸ್ಥಳವನ್ನು ಹಾಗೇ ಉಳಿಸಿ, ಉದ್ಯಾನವನವನ್ನು ಮಾಡಬೇಕು ಎಂದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಅಂತರರಾಷ್ಟ್ರೀಯವಾಗಿ ಎನವೈರನ್‌ಮೆಂಟ್ ಪೊಲ್ಯೂಷನ್ ಬಗ್ಗೆ ಚರ್ಚೆ ನಡೆಯಿತು ಇದನ್ನು ತಪ್ಪಿಸಬೇಕು ಸ್ಟಾಕ್‌ಹೋಂನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದರು. ಅವರು ಮಾತನಾಡುತ್ತಾ ನಗರಗಳಲ್ಲಿ ಹೊಸದಾಗಿ

ಕಟ್ಟುವಾಗ ಎನ್‌ವೈರನ್‌ಮೆಂಟ್ ಪೊಲ್ಯೂಷನ್ ಬಗ್ಗೆ ಫೈಟ್ ಮಾಡಬೇಕಾದರೆ ಎಲ್ಲೆಲ್ಲಿ ಉದ್ಯಾನವನಗಳು ಇವೆ, ಎಷ್ಟೆಷ್ಟು ಗಿಡಮರಗಳನ್ನು ನೆಡಬೇಕು ಎನ್ನುವುದನ್ನು ಕನ್ಸಿಡರ್ ಮಾಡಬೇಕೆಂ ಎನ್ನುವುದನ್ನೂ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಸೋವಿಯತ್ ರಷ್ಯಾಕ್ಕೆ ಒಂದು ಸಲ ಹೋಗಿದ್ದೆ. ಅಲ್ಲಿ ಅಲ್ಲಿ ಒಂದು ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಎನ್‌ವೈರನ್‌ಮೆಂಟ್ ಪೊಲ್ಯೂಷನ್ ಇನ್ ಸ್ಟೀಲ್ ಇಂಡಸ್ಟ್ರಿ ಎಂದು ಆಯಿತು. ಅದರ ಬಗ್ಗೆ ಸೆಮಿನಾರ್ ನಡೆಸಿದರು. ಇದರ ಬಗ್ಗೆ ಮಾಸ್ಕೋನಲ್ಲಿ ರೀಸರ್ಚ್ ಇನ್‌ಸ್ಟಿಟ್ಯೂಟ್ ಇಟ್ಟಿದ್ದಾರೆ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ, ಅದರಲ್ಲಿ ೨-೩ ಸಜೆಷನ್‌ಮಾಡಿದ್ದಾರೆ. ನಗರದ ಒಳಗಡೆ ಇರುವಂಥ ಫ್ಯಾಕ್ಟರೀಸ್ ಎಲ್ಲವನ್ನೂ ಸಹ ಹೊರಗಡೆ ತೆಗೆದುಕೊಂಡು ಹೋಗಬೇಕು : ಅದನ್ನು ಶಿಫ್ಟ್‌ಮಾಡಬೇಕು ಎಂದೂ ಮಾಡಿಂತ್ತಿದ್ದಾರೆ. ಎರಡನೆಯದು, ನಗರದೊಳಗೆ ಇದ್ದಂಥ ಫ್ಯಾಕ್ಟರಿ ಜಾಗವನ್ನು ಹಾಗೇ ಉಳಿಸಬೇಕು. ಲಂಗ್ ಸ್ಪೇಸನ್ನು ಹಾಗೇ ಉಳಿಸಬೇಕು, ಉದ್ಯಾನವನಗಳನ್ನು ಮಾಡಬೇಕು ಎಂದು ತೀರ್ಮಾನಮಾಡಿದ್ದಾರೆ. ಮೂರನೆಯದು, ಹೊಸ ಬಿಲ್ಡಿಂಗ್ಸ್ ಕಟ್ಟುವಾಗ ಳ ಮನೆಗಳಂ ಕಟ್ಟಿದರೆ ಅಲ್ಲಿ ಡಿಸ್ಪೆನ್ಸರಿ ಇರಬೇಕು. ೨-೩ ಷಾಪ್ಸ್ ಇರಬೇಕೆಂ ಎಂದು ಮಾಡಿದ್ದಾರೆ. ಆದುದರಿಂದ ಸಮತಾವಾದ ರಾಷ್ಟ್ರಗಳಲ್ಲಿ ಇದರ ಬಗ್ಗೆ ಗಮನಕೊಡುವುದಿಲ್ಲ, ವಾಹನಗಳು ಸಂಚಾರ ಮಾಡುವಾಗ ಬರತಕ್ಕ ಹೊಗೆಯಿಂದ ಎಷ್ಟೋ ಖಾಯಿಲೆಗಳು ಬರುತ್ತವೆ. ಫ್ಯಾಕ್ಟರಿಗಳ ಚಿಮಣಿಗಳಿಂದ ಬರತಕ್ಕ ಸ್ಮೋಕ್‌ನಿಂದಲೂ ಕೂಡ ಬಹಳ ತೊಂದರೆಯಾಗುತ್ತದೆ. ಆದಂದರಿಂದ ಅವರು ಏರ್ ಪೊಲ್ಯೂಷನ್ ಬಗ್ಗೆ ಕೂಡ ಫೈಟ್‌ಮಾಡುತ್ತಿದ್ದಾರೆ. ನಾವು ಇಷ್ಟು ದೂರ ಗಮನಕೊಟ್ಟಿಲ್ಲ ಈಗತಾನೇ ಒಂದು ಆಕ್ಟ್‌ನ್ನು ಎನಾಕ್ಟ್‌ಮಾಡುತ್ತಿದ್ದಾರೆ. ಆದುದರಿಂದ ಬೇರೆ ರಾಷ್ಟ್ರಗಳು ಇವರ ಬಗ್ಗೆ ಏನು ಮುಂದುವರೆಯುತ್ತಿದ್ದಾರೆ ಅದರಂತೆ ನಾವೂ ಕೂಡ ಮಾಡುವುದಕ್ಕೆ ಯೋಚನೆಮಾಡಿ ನಮ್ಮ ನಗರವನ್ನೂ ಸುಂದರ ನಗರವನ್ನಾಗಿ ಮಾಡಬೇಕು. ಜನಗಳಿಗೆ ಒಳ್ಳೆಯ ಹವಾ, ಗಾಳಿ ಸಿಕ್ಕುವ ಹಾಗೆ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಜಾಗವನ್ನು ಹಾಗೆಯೇ ಉಳಿಸಬೇಕು, ಉದ್ಯಾನವನವನ್ನಾಗಿ ಮಾಡಬೇಕು. ಈ ಜಾಗವನ್ನು ಇಂಟರ್ ನ್ಯಾಷನಲ್ ಬಿಸಿನೆಸ್ ಕಾಂಪ್ಲೆಕ್ಸ್ ವ್ಯಾಪಾರಸ್ಥರಿಗೆ ಹೆಚ್ಚು ಬೆಲೆಗೆ ಕೊಟ್ಟು ಹಣಮಾಡುವ ಪ್ರವೃತ್ತಿ ಸರಿಯಲ್ಲ, ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಂದು ಈ ಸಭೆಯ ಮುಂದೆ ಮಾನ್ಯ ಮಿತ್ರರಾದಂಥ ನಾಯುಡು ಅವರು ತಂದಿರತಕ್ಕ ಏನು ನಿರ್ಣಯ ಇದೆಯೋ ಅದರಲ್ಲಿರತಕ್ಕ ಎರಡು ಅಂಶಗಳನ್ನು ಕೂಡ ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ. ಮೊದಲನೆಯದಾಗಿ, ಜೂಜಿಗೆ ಸಂಬಂಧಪಟ್ಟ ಕುದುರೆ ಪಂದ್ಯ ಇರಬೇಕೇ ಎನ್ನುವುದರ ಬಗ್ಗೆ ನನ್ನದು ಪೂರ್ಣವಾದ ವಿರೋಧ. ಏಕೆಂದರೆ ಮನುಷ್ಯ ಕೆಡಬೇಕಾದರೆ ಜೂಜು ಕುಡಿತ ಮತ್ತು ಸೂಳೆಗಾರಿಕೆಯಿಂದ ಮಾನುಷ್ಯ ಕೆಟ್ಟು ಹೋಗುತ್ತಾನೆ ಎನ್ನುವುದನ್ನು ಪುರಾತನ ಕಾಲದಿಂದಲೂ ಹೇಳಿಕೊಂಡು ಬರುತ್ತಿದ್ದೇವೆ. ಈಗ ನಮ್ಮ ರಾಜ್ಯದ ದುರ್ದೈವವೋ ಏನೋ ಗೊತ್ತಾಗಲಿಲ್ಲ, ಸರ್ಕಾರದವರು ಈ ಜೂಜಿಗೆ ಬೆಂಬಲವನ್ನು ಕೊಡುತ್ತಿದ್ದಾರೆ. ಇದರಿಂದ ಅನುಕೂಲ ಮಾಡುವ ಬದಲು ಹೆಚ್ಚಿನ ಅನಾನುಕೂಲ ಜನಗಳಿಗೆ ಆಗುತ್ತಿದೆ. ಮೊದಲು ಬೇಸಿಗೆ ಕಾಲದಲ್ಲಿ ಮಾತ್ರ ಜೂಜು ನಡೆಯುತ್ತಿತ್ತು. ಈಗ ಹೆಚ್ಚು ಕಡಿಮೆ ೭-೮ ತಿಂಗಳು ನಡೆಯುವುದಕ್ಕೆ ಅವಕಾಶಮಾಡಿ ಕೊಟ್ಟು ಜನಗಳನ್ನು ಸರ್ಕಾರ ಅನೇಕ ವಿಧದಲ್ಲಿ ಶೋಷಣೆ ಮಾಡಿ ಅವರನ್ನು ಪಾಪರ್‌ಮಾಡತಕ್ಕ ಅವಸ್ಥೆಗೆ ತೆಗೆದುಕೊಂಡು ಬಂದಿದ್ದಾರೆ. ಇದರ ಜೊತೆಗೆ ಲಾಟರಿ ತೆಗೆದು ಕೊಂಡು ಬಂದರು. ಇದರಿಂದ ಜನರಿಗೆ ಲಾಟರಿಯಾಗುತ್ತಿದೆ, ಜನಗಳ ಶೋಷಣೆಯಾಗುತ್ತಿದೆಯೇ ಹೊರತು ಯಾವ ರೀತಿಯಲ್ಲೂ ಜನಗಳಿಗೆ ಸ್ವಲ್ಪಕೂಡ ಪ್ರಯೋಜನ ಇಲ್ಲ. ಒಂದು ಕಾಲದಲ್ಲಿ ಈಗ ಇರತಕ್ಕ ಕುದುರೆ ಜೂಜಿನ ಜಾಗ ಏನಿದೆಯೋ ಅದರ ಸುತ್ತಮುತ್ತ ಮನೆಗಳು ಯಾವುದೂ ಇರಲಿಲ್ಲ. ಸೆಂಟ್ರಲ್ ಜೈಲು ಇತ್ತು, ಮೈಸೂರು ಬ್ಯಾಂಕ್ ಹತ್ತಿರ ಆಸ್ಪತ್ರೆ ಇತ್ತು. ಜೆಲಿನ ಸುತ್ತಮುತ್ತ ಗಾಂಧಿನಗರ ಮುತ್ತ ಬೇರೆ ಕಡೆ ಮನೆಗಳು ಇರಲಿಲ್ಲ. ಈಗ ಅಲ್ಲಿ ಮನೆಗಳು ಆಗಿವೆ. ಆದುದರಿಂದ ಪೂರ್ಣವಾಗಿ ಜೂಜು ನಡೆಸುವುದನ್ನು ಕಿತ್ತುಹಾಕಬೇಕು ಎನ್ನುವುದೇ ನನ್ನ ವಾದ. ಏಕೆಂದರೆ ಶ್ರೀಮಾನ್ ವಾಯ್ದು ಅವರು ಜೂಜು ನಡೆಸುವುದನ್ನು ಬೇರೆ ಕಡೆಗೆ ನಡೆಸಬೇಕು ಅಲ್ಲಿ ನಡೆಸುವುದು ಬೇಡ ; ಎಂದು ಹೇಳಿದರು ಎಲ್ಲಿ ಮಾಡಿದರೂ ಕೂಡ ಜನಗಳಿಗೆ ಅನುಕೂಲ ಆಗುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅನಾನುಕೂಲ ಉಂಟಾಗುವುದರಿಂದ ಇದನ್ನು ಕಿತ್ತುಹಾಕಬೇಕೇ ಹೊರತು ಇಟ್ಟುಕೊಳ್ಳುವುದು ಸಾಧುವಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ಏಕೆಂದರೆ ತಮಿಳುನಾಡಿನಲ್ಲಿ ಡಿ.ಎಂ.ಕೆ. ಸರ್ಕಾರ ಇದೆ, ಅವರು ನಿಷ್ಪಕ್ಷತನದಿಂದ ಕುಡಿಯುವುದನ್ನೂ, ಜೂಜನ್ನು ತಪ್ಪಿಸಿದರು.

MR. DEPUTY SPEAKER, in the Chair.

ಈಗ ನಮ್ಮ ರಾಜ್ಯದಲ್ಲಿ ಒಂದು ಕಡೆ ಕುಡಿತ, ಮತ್ತೊಂದು ಕಡೆ ಲಾಟರಿ, ಮತ್ತು ಹಾರ್ಸ್ ರೇಸ್ ಇವುಗಳಿಂದ ವೀಪರೀತವಾದ ಹಾವಳಿಯಾಗಿದೆ. ಹೀಗಾಗಿ ಏನಾಗಿದೆ ಎಂದರೆ ಜೂಜಿಗೆ ಹೋಗತಕ್ಕವರ ಮನೆ ಹಾಳಾಗುವುದರ ಜೊತೆಗೆ ಹೊರಗಡೆಯಿಂದ ಬರತಕ್ಕವರಿಗೂ ಹೋಟೆಲ್‌ಗಳಲ್ಲಿ ರೂಮುಗಳು ಸಿಕ್ಕುವುದಿಲ್ಲ. ನನಗೆ ತಿಳಿದಹಾಗೆ ನನಗೆ ತಿಳಿದಿರತಕ್ಕವರೊಬ್ಬರು ಹೋಟಲ್ ಇಟ್ಟುಕೊಂಡಿದ್ದಾರೆ. ಅವರು ೨-೩ ವರ್ಷದಲ್ಲಿ ಲಕ್ಷಾಂತರ ರೂಪಾಯಿಗಳ ಸಂಪಾದನೆ ಮಾಡಿದ್ದಾರೆ. ಇದು ಏನಾಗಿದೆ ಎಂದರೆ ಜೂಜಿಗೆ ಹೋಗತಕ್ಕಂತ ಜನರು ಅವರ ಬಗ್ಗೆ ನನಗೆ ಬಹಳ ಅನುಭವವಾಗಿದೆ ಏಕೆಂದರೆ ನಾನು ಮದ್ರಾಸ್‌ಗೆ ಆಗಿಂದಾಗ್ಗೆ ಹೋಗಿ ಬರುತ್ತೇನೆ. ಅಲ್ಲಿ ನನ್ನ ಮಕ್ಕಳು ಇದ್ದಾರೆ ಅಲ್ಲಿ ಯಾವತ್ತು ರೇಸ್ ಇರುತ್ತದೆಯೋ ಅವತ್ತಿನ ದಿವಸ ಪಡಬಾರದ ಕಷ್ಟ ಪಡಬೇಕಾಗುತ್ತದೆ ಮದ್ರಾಸ್‌ನಿಂದ ಬೆಂಗಳೂರಿಗೆ ಬರಬೇಕಾದರೆ ಇಲ್ಲಿಂದ ಅಲ್ಲಿಗೆ ಹೋಗಬೇಕಾದರೆ ಆಟೋರಿಕ್ಷಾದವರನ್ನು ಮಾತನಾಡಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಬಹಳ ಕಷ್ಟ ವಾಗತ್ತದೆ. ಇದರ ಜೊತೆಗೆ ರೇಸಿಂಗ್ ಸಂದರ್ಭದಲ್ಲಿ ರೂಮನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ, ಹೆಚ್ಚಾಗಿ ಹೋಟಲುಗಳೊಳಗೆ ಇಳಿದುಕೊಳ್ಳುವುಕ್ಕೂ ಕಷ್ಟವಾಗಿ ಅನೇಕರಿಗೆ ತೊಂದರೆಯಾಗಿರುವುದನ್ನು ನೋಡಿದ್ದೇನೆ. ಆದುದರಿಂದ ನಾಗರೀಕರಿಗೆ ಜೂಜಿನಿಂದ ಯಾವ ವಿಧವಾದ ಪ್ರಯೋಜನವೂ ಇಲ್ಲ. ಇದರಿಂದ ಒಂದು ತರಹ ಸಂಕಟವೇ ಹೊರತು ಯಾವ ವಿಧವಾದಂಥ ಪ್ರಯೋಜನವೂ ಇಲ್ಲ. ಕೆಲವರಿಗೆ ಹೆಂಡ ಕುಡಿಯುವ ಚಟ ಇರುವ ಹಾಗೆ, ಕೆಲವರಿಗೆ ಬೀಡಿ ಸೇದುವ ಚಟ ಇರುವಹಾಗೆ ಆ ಚಟವನ್ನು ತೀರಿಸುವುದಕ್ಕೆ ಇದು ಇದೆಯೇ ಹೊರತು ಆದರಿಂದ ಯಾವ ಪ್ರಯೋಜನವಾಗುವುದಿಲ್ಲ. ನನಗೆ ಗೊತ್ತಿರುವ ಹಾಗೆ ಸರ್ಕಾರಕ್ಕೆ, ಕಾರ್ಪೊರೇಷನ್‌ಗೆ ಒಂದು ಕೋಟಿ ರೂಪಾಯಿ ವರಮಾನ ಬರುತ್ತದೆ. ಸರ್ಕಾರ ಜನಗಳ ಹಿತದೃಷ್ಟಿಯನ್ನು ಗಮನಕ್ಕೆ ತೆಗೆದುಕೊಳ್ಳುವುದಾದರೆ ಒಂದು ಕೋಟಿ ರೂಪಾಯಿ ವರಮಾನ ಬರತಕ್ಕದ್ದು, ಸಾರ್ವಜನಿಕರಿಗೆ ಆದದಿಂದ ೬ ಕೋಟಿ ರೂಪಾಯಿ ನಾಶವಾಗುತ್ತಾ ಇರುವುದನ್ನು ಮರೆಯಬಾರದು. ಕೋಟ್ಯಾಂತರ ರೂಪಾಯಿಗಳು ಇದರಿಂದ ಡೈರೆಕ್ಟ್‌ಆಗಿ ಅಲ್ಲದಿದ್ದರೂ ಇನ್‌ಡೈರೆಕ್ಟಾಗಿ ವ್ಯಯವಾಗಿ ಜೂಜಿಗೆ ಹೋಗಂತವರ ಮನೆಗಳು ಹಾಳಾಗಿದೆ. ನಾನು ಈ ಜೂಜಿನ ಮುಖವನ್ನು ನೋಡಿಲ್ಲ. ಈ ಜೂಜಿನಲ್ಲಿ ಕೈಹಾಕಿ ಮನೆ ಮಾರಿಕೊಂಡು ಬೀದಿ ಬಿಕಾರಿಗಳಾಗಿರುವವರನ್ನು ನಾನು ನೋಡಿ ವ್ಯಥೆ ಪಟ್ಟಿದ್ದೇನೆ ಈ ಜೂಜಿನ ಬಗ್ಗೆ ಮಾತನಾಡುವುದಕ್ಕೆ ಯಾರಿಗಾದರೂ ಅಧಿಕಾರ ಇದೆಯೆಂದರೆ ಹಿರಿಯರಾದಂತ ಶ್ರೀ ಕೆ. ಎಂ. ನಾಗಣ್ಣನವರು ಮಾಡಬೇಕು ಎಂದು ನಾನು ಕೇಳಿದ್ದೇನೆ. ಅವರು ಕಳೆದ ೫೦ ವರ್ಷಗಳಿಂದ ಜೂಜಿಗೆ ಹೋಗತಕ್ಕವರಿದ್ದಾರೆ. ಅಂತಹವರೂ ಕೂಡ ಇವತ್ತಿನ ದಿವಸ ಈ ಕುದುರೆ ರೇಸು ಬಹಳ ಕೆಟ್ಟದ್ದು ಎಂದು ಹೇಳುವುದನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ವರಮಾನ ೧ ಕೋಟಿ ರೂಪಾಯಿ ಆಗಬಹುದು ಆದರೆ ೪ ಕೋಟಿ ರೂಪಾಯಿ ಲೂಟಿ ಆಗುತ್ತದೆ ಎನ್ನುವುದನ್ನು ಖಂಡಿತವಾಗಿ ಮರೆಯಬಾರದು. ಏಕೆಂದರೆ ಒಂದನೆಯದಾಗಿ ಆಗುತ್ತಿರತಕ್ಕ ಖರ್ಚು ಮತ್ತು ಸಾಧಾರಣವಾಗಿ ಇಲ್ಲಿರತಕ್ಕ ಮೆಂಬರ್ ಷಿಪ್ ಲಿಮಿಟ್ ಆಗಿರುತ್ತದೆ. ಇಲ್ಲಿ ಮೆಂಬರ್‌ಷಿಪ್ ಬೇರೆಯವರಿಗೆ ಸಿಕ್ಕುವುದಿಲ್ಲ. ಸ್ಟೂಯರ್ಡ್ ಎಲೆಕ್ಷನ್‌ಗೆ ಅಷ್ಟು ಕ್ಯಾನ್‌ವಾಸಿಂಗ್ ಇರುತ್ತದೆ. ಜನರಲ್ ಎಲೆಕ್ಷನ್‌ಗೆ ಅಷ್ಟು ಕ್ಯಾನ್‌ವಾಸಿಂಗ್ ಇರುವುದಿಲ್ಲ ಕಾಕ್‌ಟೇಲ್‌ಗೆ ೨೦-೩೦ ಸಾವಿರ ಖರ್ಚಾಗುತ್ತಿದೆಯೆಂದು ಕೇಳಿದ್ದೇನೆ. ಹೆಚ್ಚಿನ ಹಣ ಅಲ್ಲಿ ಖರ್ಚಾಗುತ್ತಿದ್ದರೂ ರೇಸ್ ಸರ್ಕೀಟರಿಗೆ ಬಹಳ ದೊಡ್ಡ ಕೆಲಸ ಮಕ್ಕಳಿಗೂ ದೊಡ್ಡ ಕೆಲಸ, ಮನೆಯವರಿಗೆ ಬೇಕಾದಷ್ಟು ಸಂಪಾದನೆ ಇದೆ. ರೇಸನ್ನು ಹಿಂಬಾಲಿಸಿಕೊಂಡು ಹೋಗತಕ್ಕಂಥವರು ಬಹಳ ಜನ ಇದ್ದಾರೆ. ಅಂತಹ ಜನಗಳ ದುಡ್ಡನ್ನು ಅಕ್ರಮವಾಗಿ ಉಪಯೋಗಿಸುವುದು ಬಹಳ ಶೋಚನೀಯಂವಾದ ವಿಚಾರ. ಸರ್ಕಾರದ ವರಮಾನ ೧ ಕೋಟಿ ರೂಪಾಯಿ ಆದರೆ ನಾನು ಆಗಲೇ ಹೇಳಿದಹಾಗೆ ಅನೇಕ ಕೋಟಿ ರೂಪಾಯಿಗಳ ವ್ಯವಹಾರ ನಡೆದು ಅನೇಕ ಮನೆಗಳು ಹಾಳಾಗುತ್ತಿವೆ. ಆದುದರಿಂದ ರೇಸನ್ನು ಮೊದಲು ಕಿತ್ತು ಹಾಕಬೇಕು. ಈ ಲಾಟರಿಯನ್ನು ರೇಸನ್ನು ತೆಗೆಯದೆ ಇದ್ದರೆ ಜನಗಳಿಗೆ ವಿಷ ಕೊಟ್ಟಂತಾಗುವುದಲ್ಲದೆ ಯಾವ ವಿಧವಾದ ಉಪಕಾರವೂ ಆಗುವುದಿಲ್ಲ. ಈ ರೇಸ್‌ಗಳು, ಜೂಜುಗಳನ್ನು ಮಾಡಿ ಜನಗಳಂ ಕೆಡುವ ಬದಲಂ ಯಾವ ರೀತಿಯಾದ ವಿಷವನ್ನು ಕೊಟ್ಟು ಜನಗಳು ಸಾಯುವ ರೀತಿ ಮಾಡಿದರೆ ನ್ಯಾಯವಾಗಿರುತ್ತದೆಂದು ಹೇಳುತ್ತೇನೆ. ಇನ್ನು ಜಾಗದ ಬಗ್ಗೆ ಹೇಳುತ್ತೇನೆ. ಈಗಿರತಕ್ಕ ಜಾಗವನ್ನು ದೊಡ್ಡದಾಗಿ ಮಾಡಿ ಇಂಟರ್ ನ್ಯಾಷನಲ್ ಮಾರ್ಕೆಟ್‌ಗೆ ಕೊಡಬೇಕು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ನಾನು ಬೆಂಗಳೂರಿನಲ್ಲಿ ವಾಸಮಾಡಿಕೊಂಡು ಬಂದು ೫೦ ವರ್ಷವಾಯಿತು. ಒಂದು ಕಾಲದಲ್ಲಿ ಬೆಂಗಳೂರು ಹವಾ ಬಹಳ ಚೆನ್ನಾಗಿ ಇತ್ತು. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ಬೆಂಗಳೂರು ಹವಾಕ್ಕೂ ಬೇರೆ ಕಡೆಯ ಹವಾಕ್ಕೂ ವ್ಯತ್ಯಾಸ ಕಾಣುತ್ತಾ ಇಲ್ಲ. ನಾನು ತೆಗೆದುಕೊಂಡಂಥ ಮನೆ ಅಷ್ಟು ಗಾಳಿ ಇದ್ದು ಮನೆಯಂ ಮಾಲೀಕರಂ ಮನೆ ಬಿಟ್ಟು ಹೋದರೆ ಸಾಕು ಎಂದು ಮಾರಿಬಿಟ್ಟರಂ. ಇವತ್ತು ಆ ಮನೆಗೆ ಗಾಳಿ ಬರುತ್ತಾ ಇಲ್ಲ. ಆದುದರಿಂದ ಬೆಂಗಳೂರಿನಲ್ಲಿ ಅದಷ್ಟು ಹೆಚ್ಚು ಜಾಗವನ್ನು ಓಪನ್ ಆಗಿರುವುದಕ್ಕೆ ಬಿಡಬೇಕು. ಕಬ್ಬನ್ ಪಾರ್ಕ್ ಪಕ್ಕದಲ್ಲಿ ಯಾವ ಕಟ್ಟಡವನ್ನೂ ಕಟ್ಟಕೂಡದು ಎಂದರೆ ಒಂದರ ಪಕ್ಕದಲ್ಲಿ ಇನ್ನೊಂದಂ ಹೀಗೆ ಕಟ್ಟಡಗಳು ಆಗುತ್ತಾ ಇವೆ. ಕಬ್ಬನ್ ಪಾರ್ಕ್‌ನ್ನು ಓಪನ್ ಸ್ಪೇಸ್

ಆಗಿ ಇಡಬೇಕು ಎಂದು ಶ್ರೀ ಮಾಧವರಾವ್ ಹೇಳಿದಗೂ ಕೂಡ ಮ್ಯೂಸಿಯಮ್‌ನ್ನು ಪಕ್ಕದಲ್ಲಿ ಕಟ್ಟಿದರು. ಅದರ ಪಕ್ಕದಲ್ಲಿ ಇನ್ನೊಂದು ಬಿಲ್ಡಿಂಗ್ ಕಟ್ಟಿದರು. ಹೀಗೆ ಓಪನ್ ಸ್ಪೇಸನ್ನು ಮಾಡತಕ್ಕದ್ದು ದ್ರೋಹ, ಓಪನ್ ಸ್ಪೇಸ್ ಇಂಟಿಗ್ರೇಟ್‌ಮಾಡಿ ಜನಗಳಿಗೆ ಇರುವ ಲಂಗ್ ಸ್ಪೇಸನ್ನು ಹಾಳು ಮಾಡಬೇಡಿ ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಆದುದರಿಂದ ಸೆಂಟ್ರಲ್ ಜೈಲನ್ನು ಷಿಫ್ಟ್ ಮಾಡಬೇಕೆಂದು ಪ್ರೊಪೋಸಲ್ ಮೊದಲಿನಿಂದಲೂ ಇದೆ. ಅದೂ ಕೂಡ ಆಗಲಿಲ್ಲ. ಸೆಂಟ್ರಲ್ ಜೈಲನ್ನು ಷಿಫ್ಟ್‌ಮಾಡಿ ರೇಸ್ ನಡೆಯುವುದನ್ನು ಕಿತ್ತುಹಾಕಿ ಅದನ್ನು ಓಪನ್ ಸ್ಪೇಸ್‌ಮಾಡಿ ಮಿನಿಯೇಚರ್ ಫಾರಂ ಆಫ್ ಕಬ್ಬನ್ ಪಾರ್ಕ್ ಮಾಡಬೇಕು. ಅದು ಇಲ್ಲದೇ ಹೋದರೆ ಮೈಸೂರಿನಲ್ಲಿ ಇರತಕ್ಕ ಜೂ ಇನ್ನೂ ಯಾವುದಾದರೂ ರೀತಿಯಲ್ಲಿ ಜನಗಳು ಆರಾಮವಾಗಿ ಕಾಲ ಕಳೆಯುವುದಕ್ಕೆ ಅವಕಾಶಮಾಡಿ ಕೊಡಬೇಕು. ಬೆಂಗಳೂರಿನ ಜನಸಂಖ್ಯೆ ಬಹಳ ಹಚ್ಚಿನ ರೀತಿಯಲ್ಲಿ ಬೆಳೆಯುತ್ತಿದೆ ವರ್ಷಕ್ಕೆ ೧-೧½ ಕೋಟಿ ಪ್ರುಜೆಗಳು ಹೆಚ್ಚಾಗುತ್ತಿದ್ದಾರೆ. ಹೀಗೆ ಆಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಲಂಗ್ ಸ್ಪೇಸ್ ಕಿತ್ತು ಕೊಂಡರೆ ಖಂಡಿತವಾಗಿಯೂ ಬೆಂಗಳೂರಿನಲ್ಲಿ ವಾಸಮಾಡುವುದು ನರಕವಾಸವಾಗುತ್ತದೆ. ಆದುದರಿಂದ ಕಡ್ಡಾಯವಾಗಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ನಾವೆಲ್ಲರೂ ಈ ಸಭೆಯಲ್ಲಿ ತೀರ್ಮಾನಮಾಡಿ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಜನರಿಗೆ ಒಳ್ಳೆಯದೂ ಆಗಬೇಕಾದರೆ ಈ ಹಾರ್ಸ್ ರೇಸನ್ನು ಕಿತ್ತು ಹಾಕಬೇಕು, ಲಾಟರಿಯನ್ನು ತೆಗೆಯಬೇಕು, ಕೂಡಿತವನ್ನು ನಿಲ್ಲಿಸಬೇಕು. ಕೂಡಿಯುವುದರಿಂದ ೪೦ ಕೋಟಿ ರೂಪಾಯಿ ಹಾರ್ಸ್ ರೇಸ್‌ನಿಂದ ೧½ ಕೋಟಿ ರೂಪಾಯಿ, ಲಾಟರಿಯಿಂದ ೧ ಕೋಟಿ ರೂಪಾಯಿ ಬರುತ್ತಿದೆ. ಆದರೆ ೪೨-೪೩ ಕೋಟಿ ರೂಪಾಯಿ ಬಂದರೂ ಕೂಡ ಅದರಿಂದ ಆಗತಕ್ಕ ಅನಾಹುತ ವಿಪರೀತವಾಗಿರುತ್ತದೆ. ಸರ್ಕಾರದವರು ಈ ಜನರ ಹಿತದೃಷ್ಟಿಯನ್ನು ಇಟ್ಟುಕೊಂಡಿದ್ದರೆ ವರಮಾನದ ಬಗ್ಗೆ ಯೋಚನೆ ಮಾಡಬಾರದು. ಜನಗಳ ಹಿತವನ್ನು ಕಾಪಾಡುವುದಕ್ಕೆ ರಾಜ್ಯ ಸರ್ಕಾರ ಬೇಕಾದಷ್ಟು ದುಡ್ಡನ್ನು ನಾನಾ ರೀತಿಯಲ್ಲಿ ಖರ್ಚುಮಾಡುತ್ತಿದೆ. ಆದರಿಂದ ಬರತಕ್ಕ ಪಾಪದ ಹಣವನ್ನು ತೆಗೆದುಕೊಂಡು ಸರ್ಕಾರ ನಡೆಸುವುದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಈ ವರಮಾನವನ್ನು ಸ್ವಲ್ಪವೂ ಗಮನಕ್ಕೆ ತೆಗೆದುಕೊಳ್ಳದೆ ಈ ಒಂದು ಕುದುರೆ ಪಂದ್ಯ ಏನು ಇದೆ ಅದನ್ನು ಪೂರ್ಣವಾಗಿ ಕಿತ್ತು ಹಾಕಬೇಕು. ಇದರಿಂದ ಯಾರಿಗೂ ಏನೂ ತೊಂದರೆ ಯಾಗುವುದಿಲ್ಲ ಮಾನ್ಯ ಕೃಷ್ಣನ್‌ರವರು ಹೇಳಿದಹಾಗೆ ರೇಸಿಗೆ ಸಾಹುಕಾರರು ಕಾರು ಮಂಠಾದ ವಾಹನ ಗಳಲ್ಲಿ ಬರುತ್ತಾರೆ. ಸಾಹುಕಾರರೇ ಅಲ್ಲ, ಕೆಲವರು ವಿಧವೆಯರೂ ರೇಸ್ ಬಗ್ಗೆ ಶ್ರದ್ಧೆ ವಹಿಸುತ್ತಾರೆ. ಇದರಿಂದ ಕಾರ್ಪೊರೇಷನ್‌ನಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗುತ್ತಿದೆ. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಅನೇಕರು ಅನೇಕ ಸಂದರ್ಭಗಳಲ್ಲಿ ಕಾರ್ಪೊರೇಷನ್ ಹಣ ವನ್ನು ಈ ರೇಸ್‌ಗೋಸ್ಕರ ಕಳೆದು ಮಿಸ್ ಅಪ್ರೋಪ್ರಿಯೇಷನ್ ಆಗುತ್ತಾ ಇದೆ. ಜೊತೆಗೆ ಈ ಹಾರ್ಸ್ ರೇಸ್‌ಗೆ ಹೋಗಬೇಕಾದಾಗ ಅನೇಕ ಆಫೀಸ್‌ಗಳಲ್ಲಿ ಕೆಲಸಮಾಡುವುದಕ್ಕೆ ಬದಲಾಗಿ ಅಟೆಂಡೆನ್ಸ್ ಹಾಕಿಬಿಟ್ಟು ರೇಸ್‌ಗೆ ಹೊರಟು ಹೋಗುತ್ತಾರೆ. ಇದರಿಂದ ಡೈರೆಕ್ಟ್‌ವಿ ಮತ್ತು ಇನ್‌ಡೈರೆಕ್ಟ್‌ವಾಗಿ ಜನಗಳ ಹಿತದೃಷ್ಟಿಗೆ ದಕ್ಕೆ ಬರುವುದರಿಂದ ಸರ್ಕಾರಕ್ಕೆ ಜನಗಳಿಗೆ ಒಳ್ಳೆಯದನ್ನು ಮಾಡಬೇಕು ಎನ್ನುವ ಅಂಶ ಇದ್ದರೆ ಇವತ್ತಿನ ದಿವಸ ಆರ್ಥ ಸಚಿವರು ರೇಸ್ ಮಾಡುವುದಕ್ಕೆ ಬಿಟ್ಟು ಕೊಡುವುದಿಲ್ಲವೆಂದು ದಿಟ್ಟತನದ ನಿಲುವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಹಾಗೆ ಮಾಡುವುದಕ್ಕೆ ಬದಲಾಗಿ ರೇಸ್ ಮತ್ತು ಲಾಟರಿ ಯನ್ನು ನಡೆಸಿಕೊಂಡು ಬಂದು ಅದರ ಜೊತೆಗೆ ಜನಗಳಿಗೆ ಕೂಡಿಯುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಖಂಡಿತ ಒಳ್ಳೆಯದಾಗುವುದಿಲ್ಲ. ಇನ್ನೂ ದುಡ್ಡು ಬೇಕಾದರೆ ಸೂಳೆಗಾರಿಕೆ ನಡೆಯುವುದಕ್ಕೆ ಸೂಳೆಗೃಹಕ್ಕೆ ಲೈಸೆನ್ಸ್ ಕೊಟ್ಟುಬಿಡಿ, ಅದೂ ನಡೆದು ಹೋಗಲಿ, ಎಲ್ಲಾ ಜನರೂ ಇದರಿಂದ ಹೆಚ್ಚಿ ವಿಷಾದಪಡ ಬೇಕಾಗುತ್ತದೆ. ದಯವಿಟ್ಟು ನಾನು ಕೇಳಿಕೊಳ್ಳುವುದು ಇಷ್ಟೆ ಈ ರೇಸನ್ನು ಕಿತ್ತುಹಾಕಿ ರೇಸ್‌ಕೋರ್ಸ್‌ನಲ್ಲಿ ಇರತಕ್ಕ ಜಾಗವನ್ನು ಖಂಡಿತವಾಗಿಯೂ ಓಪನ್ ಸ್ಪೇಸ್‌ಆಗಿ ಬಿಟ್ಟು ನಾಗರೀಕರ ಸೌಲಭ್ಯಕ್ಕಾಗಿ ಬಿಡಬೇಕು. ಇದನ್ನು ಓಪನ್ ಸ್ಪೇಸ್ ಮಾಡುವುದರ ಜೊತೆಗೆ ಸೆಂಟ್ರಲ್ ಜೈಲನ್ನು ಬೇರೆ ಕಡೆಗೆ ಷಿಫ್ಟ್ ಮಾಡಿ ಅಲ್ಲಿ ವಿಶಾಲವಾದ ಜಾಗವನ್ನು ಮಾಡಿ ಜನಗಳ ಸೌಕರ್ಯಕ್ಕೆ ಯಾವರೀತಿ ಮಾಡಿದರೆ ಅನುಕೂಲ ವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಶ್ರೀ ನಾಯ್ಡು ಅವರು ತಂದಿರತಕ್ಕ ಎರಡು ಸಲಹೆಗಳಲ್ಲಿ ಒಂದನೆಯದು ರೇಸ್ ಕೋರ್ಸನ್ನು ಷಿಫ್ಟ್ ಮಾಡಬೇಕು ಮತ್ತು ಅದನ್ನು ಕಿತ್ತು ಹಾಕಬೇಕು. ಎರಡನೆಯದು ಇಂಟರ್‌ನ್ಯಾಷನಲ್ ಕಟ್ಟಡ ಆಗುತ್ತಿದೆ. ಆದರಿಂದ ದುಡ್ಡು ಬರುತ್ತದೆಂದು ಆ ಪಾಪದ ಕೆಲಸವನ್ನು ಮಾಡುವುದಕ್ಕೆ ಹೋಗಬಾರದು. ಹಾಗಾದರೆ ಜನಗಳ ಕೃತಜ್ಞತೆಯನ್ನು ನಾವು ಸಂಪಾದನೆ ಮಾಡುತ್ತೇವೆ. ಈ ರೇಸಿಂಗ್, ಲಾಟರಿ ಮತ್ತು ಕೂಡಿತವನ್ನು ನಡೆಸಿಕೊಂಡು ಹೋಗುತ್ತಾ ಬಂದರೆ ನಮಗೆ ಕಷ್ಟ ತಪ್ಪಿದಲ್ಲವೇದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

† ಶ್ರೀ ಎಸ್. ಹಮಿದ್ ಪಾ (ಶಿವಾಜಿನಗರ).— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಿತ್ರರಾದಂತ ನಾಯಿಡುರವಗು ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ, ಕೆಲವು ಮಾತುಗಳನ್ನು ಆಡುವುದಕ್ಕೆ ನಿಂತಿದ್ದೇನೆ, ಮಾನ್ಯ ಮಿತ್ರರಾದ ಕೃಷ್ಣನ್‌ನವರು ನನ್ನನ್ನು ನೋಡಿ ನೀವು ಮಾತನಾಡಿ ಎಂದು ಹೇಳಿದರು. ನನ್ನ ಫ್ಯಾಮಿಲಿಯಲ್ಲಿ ೪-೬ ಜನ ರೇಸ್‌ನಲ್ಲಿ ಕೆಲಸಮಾಡುತ್ತಾ ಇದ್ದರೆ ಅದರಲ್ಲಿ ಸಂಶಯ ಇಲ್ಲ. ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ನನ್ನ ಇಬ್ಬರು ತಮ್ಮಂದಿರು ಸೇರಿ ರೇಸ್ ಹಾರ್ಸ ಟ್ರೇಸರ್ಸ್ ನಾಲ್ಕು ಜನ ಟ್ರೇನರ್ಸ್ ಆಗಿದ್ದಾರೆ ಆದರಲ್ಲಿಯೂ ಏನು ಸಂಶಯ ಇಲ್ಲ. ಆದುದರಿಂದ ರೇಸ್‌ಕೋರ್ಸ್ ಎಲ್ಲಿ ಇರಬೇಕು, ನಮ್ಮ ಫ್ಯಾಮಿಲಿಗೋಸ್ಕರ ಇರಬೇಕು ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ಕುದುರೆಗಳು ಎಷ್ಟು ಬೇಕೋ ಅಷ್ಟು ಇದೆ. ರೇಸ್‌ಕೋರ್ಸನ್ನು ಆಚೆ ತೆಗೆದುಕೊಂಡು ಹಾಕುವುದು ತುಂಬ ಒಳ್ಳೆಯದು. ಮದ್ರಾಸ್‌ನಲ್ಲಿ ರೇಸ್ ಬಂದ್ ಆಗಿದೆ. ಪೊಲಿಟಿಕಲ್ ಸ್ಟೆಂಟ್ ಮಾಡಿದ್ದಾರೆ ಎಂದು ಜನ ಹೇಳುತ್ತಾರೆ, ಇದರ ಬಗ್ಗೆ ನಾವು ಮಾತನಾಡಬಾರದು. ರೇಸ್‌ಕೋರ್ಸ್ ಊರು ಮಧ್ಯದಲ್ಲಿ ಇರುವುದರಿಂದ, ಜನಗಳಿಗೆ ತುಂಬಾ ತೊಂದರೆ ಆಗುತ್ತಾ ಇದೆ, ಅದನ್ನು ಆಚೆಗೆ ತೆಗೆದುಕೊಂಡು ಹೋಗುವುದು ತುಂಬಾ ಒಳ್ಳೆಯದೆಂದು ನನ್ನ ಅಭಿಪ್ರಾಯ. ಇದೇರೀತಿ ಬೆಂಗಳೂರಿನಲ್ಲಿ ನಾನಾ ತರಹದ ಜಾಗಗಳನ್ನು ಬೇರೆಯವರು ಹಿಡಿದುಕೊಂಡು ಕೂತಿದ್ದಾರೆ, ಮಿಲಿಟರಿಯವರ ಕೈಯಲ್ಲಿ ಸರ್ವೇಸಾಧಾರಣವಾಗಿ, ಶಾಪಿಂಗ್‌ಗು ಎಕರೆ ಸಿಕ್ಕಿಕೊಂಡಿದೆ. ಇನ್ನೂ ಸ್ವಲ್ಪ ಮುಂದೆ ಹೋಗಿ ನೋಡಿದರೆ ರೇಸ್‌ಕೋರ್ಸಿನವರು ಸೆಂಟ್ರಲ್ ಜೈಲಿನವರು ಬೆಂಗಳೂರನ್ನು ಮೊಸಳೆ ಹಿಡಿದುಕೊಂಡ ಹಾಗೆ ಹಿಡಿದುಕೊಂಡು ಕೂತಿದ್ದಾರೆ. ಬೆಂಗಳೂರನ್ನು ಸುಂದರ ಮಾಡಿಸಬೇಕು, ಬೆಂಗಳೂರು ಒಳ್ಳೆಯ ರೀತಿಯಲ್ಲಿ ಇರಬೇಕು, ಬೆಂಗಳೂರಿನಲ್ಲಿ ಪಾರ್ಕ್ಸ್ ಇರಬೇಕು. ಬೆಂಗಳೂರನ್ನು ಹಳೇ ಕಾಲದಲ್ಲಿ ಗಾರ್ಡನೆಸಿಟಿ ಎಂದು ಹೇಳುತ್ತಿದ್ದರು, ಈಗ ಗಾರ್ಡನ್ ಸಿಟಿ ಹೋಗಿ ಗೋಡೌನ್ ಸಿಟಿ ಆಗಿದೆ. ಎಲ್ಲಿ ನೋಡಿದರೂ ಸ್ವಲ್ಪ ಜಾಗ ಇದ್ದರೂ ಕೂಡ ಕಟ್ಟಡಗಳನ್ನು ಕಟ್ಟುತ್ತಾ ಇದ್ದಾರೆ ಬೆಂಗಳೂರನ್ನು ಗಾರ್ಡನ್ ಸಿಟಿ ಮಾಡಬೇಕಾದರೆ, ಇಂಥ ದೊಡ್ಡ ಜಾಗಗಳನ್ನು ಅವರ ಕೈಯಿಂದ ತಪ್ಪಿಸಿ, ನಾವು ಪಾರ್ಕ್ಸ್ ಕಟ್ಟಬೇಕು. ಬೆಂಗಳೂರಿನಲ್ಲಿ ಒಳ್ಳೆಯ ಲಂಗ್ ಸ್ಪೇಸ್ ಇರಬೇಕು, ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ ಹಳೇ ಕಾಲದಲ್ಲಿ ರೋಗಿಗಳು ಬೆಂಗಳೂರಿಗೆ ಬಂದು ತಮ್ಮ ಮೈ ಸುಧಾರಿಸಿಕೊಂಡು ಹೋಗುತ್ತಿದ್ದರು. ಈಗ, ಬೆಂಗಳೂರಿನ ರೋಗ ಬೇರೆ ದೇಶಗಳಿಗೆ ಹೋಗುತ್ತಾ ಇದೆ ಎಂದು ಕಾಣುತ್ತದೆ, ಬೆಂಗಳೂರಿನಲ್ಲಿರುವ ರೋಗಗಳು ಬೇರೆ ಜಾಗದಲ್ಲಿ ಇಲ್ಲ, ಅದಕ್ಕೆ ಹಲವಾರು ಕಾರಣಗಳು ಇವೆ. ಆಸ್ಪತ್ರೆಗೆ ಹೋದ ತಕ್ಷಣ ರೋಗಗಳು ವಾಸಿಯಾಗುತ್ತಿದ್ದವು ಎಂದು ನಾವು ಕೇಳಿದ್ದೇವೆ, ಈಗ ಗಾಳಿ ಇಲ್ಲ ನಾನು ಬೆಂಗಳೂರಿಗೆ ಬಂದು ೩೨ ವರ್ಷದ ಮೇಲೆ ಆಯಿತು. ಆಗ ಕ್ಯಾನ್ಸರ್ ವ್ಯಾಧಿ ಇರಲಿಲ್ಲ, ಟಿ.ಬಿ. ಇರಲಿಲ್ಲ, ಟಿ.ಬಿ. ರೋಗಿಗಳು ಬೇರೆ ದೇಶಗಳಿಂದ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆದುಕೊಂಡು ಹೋಗುತ್ತಿದ್ದರು. ಬೆಂಗಳೂರಿನಲ್ಲಿ ಟಿ.ಬಿ. ಜಾಸ್ತಿಯಾಗುತ್ತಾ ಇದೆ. ಎಲ್ಲಿ ನೋಡಿದರು ೧೦ × ೧೦ ಜಾಗ ಇದ್ದರೆ ಅಲ್ಲಿ, ಮನೆ ಕಟ್ಟಿಬಿಡುತ್ತಾರೆ. ಗಾಳಿ ಒಳ್ಳೆಯ ರೀತಿಯಲ್ಲಿ ಬರಬೇಕು ಎಂದರೆ, ಜಾಗ ಇರ. ನಾನು ಒಂದು ಜಾಗ ನೋಡಿದ್ದೇನೆ, ಬಸ್ಟ್ಯಾಂಡ್ ಮುಂದುಗಡೆ ಒಂದು ಮನೆ ಕಟ್ಟಿದ್ದಾರೆ ೫ × ೧೦ ಇರಬಹುದು. ಇದು ಏನು ಎಂದು ಕೇಳಿದರೆ ವಾಸ ಮಾಡಲಿಕ್ಕೆ ಜಾಗ ಇರಲಿಲ್ಲ ಮನೆ ಕಟ್ಟಿದ್ದೇವೆ ಎಂದು ಹೇಳಿದರು. ಇಂಥ ಮನೆಗಳು ಕಟ್ಟಿಕೊಂಡಿರುವುದರಿಂದ ಊರಿನಲ್ಲಿ ಇಂಥ ದೊಡ್ಡ ದೊಡ್ಡ ಜಾಗಗಳು ಆದರಲ್ಲಿಯೂ ರೇಸ್‌ಕೋರ್ಸ್, ಮಿಲಿಟರಿಯವರದ್ದು ಮತ್ತೆ ಸೆಂಟ್ರಲ್ ಜೈಲ್ ಇಟ್ಟು ಕೊಂಡಿದ್ದರೆ, ಎಲ್ಲಿ ನೋಡಿದರೆ ಜಾಗ ಇಲ್ಲ. ಬೆಂಗಳೂರಿನಲ್ಲಿ ಇರುವುದು ಎರಡು ಪಾರ್ಕ ಒಂದು ಕಬ್ಬನ್ ಪಾರ್ಕ, ಇನ್ನೊಂದು ಲಾಲ್‌ಬಗ್. ಕಬ್ಬನ್ ಪಾರ್ಕಗೆ ಹಳೇ ಕಾಲದಲ್ಲಿ ಕಬ್ಬನ್ ಪಾರ್ಕ ಹೆಸರು ಇಟ್ಟಿದ್ದಾರೆ ಈಗ ಕಬ್ಬಿನ ಮತ್ತು ಸೀಮೆಂಟ್‌ನಿಂದ ಕಟ್ಟಿರುವ ಬಿಲ್ಡಿಂಗ್‌ಗಳು ಇರುವುದರಿಂದ ಕಬ್ಬನ್ ಪಾರ್ಕ ಹೋಗಿ ಕಬ್ಬಿಣದ ಪಾರ್ಕ ಆಗಿದೆ. ಪಾರ್ಕಗೆ ಹೋಗುವುದಕ್ಕೆ ಜಾಗ ಇಲ್ಲ, ಮ್ಯೂಸಿಯಂ ಹತ್ತಿರ ಸಣ್ಣ ದಾರಿ, ಕಬ್ಬನ್ ಪಾರ್ಕಗೆ ಹೋಗುವುದಕ್ಕೆ ನೋಡಿದರೆ ಮತ್ತೆ ಆಠಾರಾ ಕಛೇರಿ ಮುಂದುಗಡೆ ಹೋಗಿ ನೋಡಿದರೆ ಸುತ್ತಿಕೊಂಡು ಒಳಗಡೆ ಬಂದು ಕಬ್ಬನ್ ಪಾರ್ಕನ್ನು ಅಲ್ಲಿಂದ ನಿಂತುಕೊಂಡು ನೋಡುವುದಕ್ಕೆ ಆಗುವುದಿಲ್ಲ. ಬೆಂಗಳೂರಿನಲ್ಲಿ ಲಂಗ್‌ಸ್ಪೇಸ್ ಇಲ್ಲದೇ ಇರುವುದರಿಂದ ವ್ಯಾಧಿಗಳು ಜಾಸ್ತಿ ಆಗುತ್ತಾ ಇರುವುದು, ಲಂಗ್‌ಸ್ಪೇಸ್ ಇಲ್ಲದೇ ಹೋದರೆ ಜನಗಳಿಗೆ ಕಷ್ಟವಾಗುತ್ತದೆ, ರೇಸ್‌ಕೋರ್ಸನಿಂದ ವರಮಾನ ಇದೆ, ಇಲ್ಲ ಎಂದು ಹೇಳುವುದಕ್ಕೆ ತಯಾರು ಇಲ್ಲ. ನಮ್ಮ ಮಿತ್ರರು ಹೇಳುತ್ತಿದ್ದಾರೆ, ಜೂಜು ಆಡುವುದು ಬೇಡ ಎಂದು, ಇದು ನಮ್ಮ ಸಂಪ್ರದಾಯ. ಹಳೇ ಕಾಲದಿಂದ ಮಹಾಭಾರತದ ಕಾಲದಿಂದಲೂ ಜೂಜು ಆಡುತ್ತಿದ್ದೇವೆ. ಇದು ಹೊಸದೇನು ಅಲ್ಲ, ಜೂಜು ಆಡುವುದು ನಮ್ಮ ಪದ್ಧತಿ. ಮಾನ್ಯ

ಕೃಷ್ಣನ್‌ನವರು ಜೂಜು ಆಡುವುದನ್ನು ಬಿಟ್ಟು ಬಿಡಬೇಕು ಎಂದು ಹೇಳಿದರು. ರಷ್ಯಾ ಮತ್ತು ಮಾಸ್ಕೋ ದಲ್ಲಿ ಇದು ಒಂದು ಸಂಪ್ರದಾಯ ಆಗಿದೆ. ಯಾವುದೋ ಒಂದು ವಿಧವಾದ ಜೂಜು ಆಡುತ್ತಾ ಇದ್ದಾರೆ. ಒಂದ ಕಾರ್ ನಮ್ಮ ಮುಂದೆ ಹೋಗುತ್ತಾ ಇದ್ದಲೆ, ಅದರ ನಂಬರ್ಸ್ ಮೇಲೆ ಜೂಜು ಆಡುತ್ತಾರೆ. ಒಂದು ನಂಬರ್ ಬರುತ್ತದೆ ಅಥವಾ ಎರಡು ನಂಬರ್ ಬರುತ್ತದೆ. ಜೂಜು ಆಡುವುದು ಮನುಷ್ಯ ಬಿಡುವುದಿಲ್ಲ, ಹುಟ್ಟಿದ ಕಾಲದಿಂದ ಇದುವರೆಗೆ ಜೂಜು ಆಡುತ್ತಿದ್ದಾನೆ. ಜೂಜು ಆಡುವುದನ್ನು ಬಿಟ್ಟುಬಿಡಬೇಕು, ಜೂಜು ಆಡುವುದನ್ನು ಬಿಟ್ಟುಬಿಟ್ಟರೆ ಕುದುರೆ ಸಾಕುವವರ ಗತಿ ಏನು ? ಕುದುರೆಗಳನ್ನು ಉಪಯೋಗ ಮಾಡುವವರ ಗತಿ ಏನು ? ಜೂಜು ಆಡುವುದನ್ನು ಯಾರು ಬಿಡುವುದಿಲ್ಲ, ಶಾಮಣ್ಣ ಅಥವಾ ನಾನು ಬಿಡುಬಹುದು ಅದನ್ನು ಒಪ್ಪಿಕೊಳ್ಳೋಣ, ಮಾನ್ಯ ಮಿತ್ರರಾದ ನಾಗಣ್ಣವರಿಗೆ ರೇಸ್‌ಕೋರ್ಸ್ ಬಿಟ್ಟರೆ ಬೇರೆ ಎಂಟ್ರೈಟೆಯಿನೆಮೆಂಟ್ ಇರಲಿಲ್ಲ, ಆ ತರಹ ಕಾಲ ಇತ್ತು. ಈಗ ಹೋಗುತ್ತಾ ಇದ್ದಾರೋ ಇಲ್ಲವೋ ಗೋತ್ತಿಲ್ಲ. ಅವರು ಮೇಯರ್ ಆಗಿದ್ದ ಕಾಲದಲ್ಲಿ ಒಂದು ಪಾಕೆಟ್‌ನಲ್ಲಿ ಬುಕ್ ಇರುತ್ತಾ ಇತ್ತು. ಈಗ ಬಿಟ್ಟುಬಿಟ್ಟಿದ್ದಾರೆ, ನಾನು ಬಿಟ್ಟುಬಿಟ್ಟಿದ್ದೇನೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ರೇಸ್ ಆಡುವವರ ಜನರ ಮಧ್ಯದಲ್ಲಿ ಹುಟ್ಟಿದ್ದೇನೆ. ಅದೇ ಮನೆಯಲ್ಲಿ ದ್ದೇನೆ, ಊಟ ತಿನ್ನುತ್ತೇನೆ, ಅದೇ ಬಟ್ಟೆ ಹಾಕುತ್ತೇನೆ. ನನ್ನ ಲೈಫ್‌ನಲ್ಲಿ ಒಂದೇ ಒಂದು ಸಾರಿ ಪಾಸ್ ನಮ್ಮ ಗೌರ್ನಮೆಂಟಿನವರು ಕೊಟ್ಟರು, ನನ್ನ ತಮ್ಮಂದಿರು ಹೋಗಿ ದಿನಾ ಬರುತ್ತಾರೆ ೪೦ ಹಾರ್ಸ ಇದೆ, ೩೦ ಹಾರ್ಸ್ ಇದೆ. ಯಾರದು ದೊಡ್ಡ ದೊಡ್ಡ ಶ್ರೀಮಂತರದು. ಶ್ರೀಮಂತರಿಗೆ ಹಾಗೆ ಬೆಟ್ಟದ ಇನ್ನೂ ಬೆಳೆಯುತ್ತಾರೆ, ಇನ್ನು ದುಡ್ಡು ಜಾಸ್ತಿ ಆಗುತ್ತದೆ, ಶ್ರೀಮಂತರಿಗ ತಪ್ಪಿಸುವುದಕ್ಕೆ ರೇಸ್ ಇರಲೇಬೇಕು ಅವರಿಂದ ದುಡ್ಡ ಕಿತ್ತು ಕೊಳ್ಳುವುದಕ್ಕೆ, ನಮ್ಮ ಪಕ್ಷಕ್ಕೆ ದುಡ್ಡು ಬರಬೇಕಾದರೆ, ಶ್ರೀಮಂತರಿಂದ ದುಡ್ಡು ಮಾಪಸ್ಸು ಬರಬೇಕಾದರೆ, ರೇಸ್ ಇಲ್ಲದೆ ಹೋದರೆ ಏನೂ ಆಗುವುದಿಲ್ಲ. ಆದರಿಂದ ಜೂಜು ಆಡಿಸಲೇ ಬೇಕು ಜೂಜು ಆಡದೇ ಹೋದರೆ ದುಡ್ಡು ಸಿಕ್ಕುವುದಿಲ್ಲ...

ಶ್ರೀ ಸಿ. ಬೈರೇಗೌಡ.— ರೇಸ್ ಸಮಾಜವಾದ ತರುವುದಕ್ಕೆ ಹೊರಟಿದ್ದೀರಿ.

ಶ್ರೀ ಎಸ್. ಹವಿದ್ ಷಾ.— ರೇಸ್‌ಕೋರ್ಸಿಗೆ ಸಮಾಜವಾದಕ್ಕೆ ಏನು ಸಾಬಂಧ ತಾವು ಕೇಳುತ್ತಾ ಇರುವುದು ಚೈನಾ ಸಮಾಜವಾದ. ಅಲ್ಲಿ ಕುದುರೆಗಳು ಹುಟ್ಟುವುದಿಲ್ಲ. ಕುದುರೆಗಳನ್ನು ತಿಂದುಹಾಕುತ್ತಾರೆ, ಯಾವ ಪ್ರಾಣಿಯನ್ನೂ ಬಿಡುವುದಿಲ್ಲ. ಭಾರತದಲ್ಲಿ ಕುದುರೆಯನ್ನು ಅಶ್ವಮೇಧ ಮಾಡುವ ಜನ, ಅದರ ಮೇಲೆ ಪುಣ್ಯ ನಡೆಸಬೇಕಾಗುತ್ತದೆ. ಆದುದರಿಂದ ತಾವು ಚೈನಾ ಮಾತು ಬಿಟ್ಟುಬಿಡಿ. ಮಾನ್ಯ ಅಧ್ಯಕ್ಷರೇ ರೇಸ್‌ಕೋರ್ಸನ್ನು, ಸೆಂಟ್ರಲ್ ಜೈಲ್‌ನ್ನು ಮತ್ತು ಮಿಲಿಟರಿ ಜಾಗಗಳನ್ನು ತಪ್ಪಿಸಿದರೆ ಬೆಂಗಳೂರಿನಲ್ಲಿ ಹೆಚ್ಚು ಲಾಂಚ್‌ಜಾಗ ಸಿಕ್ಕುತ್ತದೆ ಆದರಿಂದ ಒಳ್ಳೆಯ ಕೆಲಸ ಮಾಡಬಹುದು ಅಲ್ಲಿ ಮಾನ್ಯ ನಾಯ್ಡುರವರು ಅಲ್ಲಿ ಒಂದು ಇಂಟರ್ ನ್ಯಾಷನಲ್ ವ್ಯಾಪಾರ ಸ್ಥಳವನ್ನು ಕಟ್ಟಬೇಕೆಂದು ಸೂಚಿಸಿದರು ಅದನ್ನು ಮುಂದೆ ಯೋಚನೆ ಮಾಡೋಣ, ಮೊದಲು ತಪ್ಪಿಸುವುದಕ್ಕೆ ಪ್ರಯತ್ನ ಮಾಡೋಣ. ಈಗ ಬೀಸುವ ದೊಣ್ಣೆ ತಪ್ಪಿದರೆ ೧೦೨ ವರ್ಷ ಆಯುಸ್ಸು ಎಂದು ಹೇಳುತ್ತೇನೆ ಆದರಿಂದ ತಮ್ಮ ಮುಖಾಂತರ ಸಚಿವರನ್ನು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ) — ಮಾನ್ಯ ಅಧ್ಯಕ್ಷೆಯವರೆ, ಈ ರೇಸ್ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂತ ಮಾನ್ಯ ನಾಯ್ಡು ಅವರಿಗೆ ಮೊದಲನೆಯದಾಗಿ ವಂದಿಸಬೇಕಾಗಿದೆ. ನನ್ನಗೆ ಈ ರೇಸ್ ವಿಷಯದಲ್ಲಿ ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಎಲ್ಲದಕ್ಕಿಂಥ ಹೆಚ್ಚಿನ ಅನುಭವ ಇದೆ. ನಾನು ಮೊದಲ ಬಾರಿ ರೇಸಿಗೆ ಹೋಗಿದ್ದು ಎಂದರೆ ೧೯೨೨ನೇ ಇಸವಿಯಲ್ಲಿ, ಆಗ ನನಗೆ ಇನ್ನು ಮದುವೆ ಆಗಿರಲಿಲ್ಲ, ಆ ಕಾಲದಲ್ಲೇ ನಾನು ರೇಸಿಗೆ ಹೋಗಿದ್ದೆ. ಆಗ ನಮಗೆ ಸಂಪಾದನೆ ಬಹಳ ಕಡಿಮೆ ಇತ್ತು, ಈಸಿ ಮನಿ ಮಾಡಬೇಕು ಎನ್ನುವುದು ಮನಸ್ಸಿನಲ್ಲಿ ಹುಟ್ಟಿದ ಪ್ರಯುಕ್ತ ನಾನು ರೇಸಿಗೆ ಹೋಗುವುದಕ್ಕೆ ಪ್ರಯತ್ನ ಮಾಡಿದೆ. ಈ ರೇಸ್ ಆಗುವುದು ಹ್ಯೂಮನ್ ವೀಕ್‌ನೆಸ್ ಎಂದು ಹೇಳಿದರೆ ತಪ್ಪಾಗಲಾರದು. ಈ ಹ್ಯೂಮನ್ ವೀಕ್‌ನೆಸ್ ತಪ್ಪಿಸಬೇಕಾದರೆ, ಅದು ಸರ್ಕಾರದವರ ಆದ್ಯಕರ್ತವ್ಯ ಎಂದು ತಿಳಿದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಪಡುತ್ತೇನೆ. ಈಗ ನಾನು ಈ ರೇಸಿಗೆ ೫೦ ವರ್ಷಗಳ ಕಾಲ ಹೋಗಿದ್ದರ ಪರಿಣಾಮ ಏನಾಯಿತು, ಎಂದರೆ, ಉದ್ದೇಶ ಈಸಿ ಮನಿ ಮಾಡಬೇಕು ಎಂದು ಹೋಗಿ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುವ ಪರಿಸ್ಥಿತಿ ಬಂತು. ಈಗ ನಮ್ಮ ಅರ್ಥಸಚಿವರು ರೇಸಿಗೆ ತುಂಬಾ ಹಣವಂತರು ಹೋಗುತ್ತಾರೆ ಎಂದು ತಿಳಿದುಕೊಂಡಿದ್ದಾರೆ ಅದು ತಪ್ಪು. ಸಾಮಾನ್ಯವಾಗಿ ಹಣವಂತರು ರೇಸಿಗೆ ಹೋದರೂ ಕೂಡ ಅವರು ಅದನ್ನು ನೋಡಲಿಕ್ಕೆ ಹೋಗುತ್ತಾರೆಯೇ ಹೊರತು ಆಟ ಆಡುವುದಿಲ್ಲ. ಆದರೆ ಬಡವರು ಸುಲಭವಾಗಿ ಹಣ ಸಂಪಾದನೆ ಮಾಡಬಹುದು ಬಂದು ಹಣ ಕಟ್ಟಿ ಕಳೆದುಕೊಳ್ಳುತ್ತಾರೆ. ಇದಕ್ಕೆ ಒಂದು ನಿದರ್ಶನ ಹೇಳಬೇಕು ಎಂದರೆ ಇವೊತ್ತಿನ

ದಿವಸ ಹಳೇ ಪೇಪರ್, ಖಾಲಿ ಚೀಪಾಯಿ ಮಾರುವವರು ಈ ರೇಸಿಗೆ ಹೋಗುತ್ತಿದ್ದಾರೆ ಅವರು ಏತಕ್ಕೆ ಹೋಗುತ್ತಾರೆ ಎಂದರೆ ಈಸಿ ಮನಿ ಮಾಡಬಹುದು ಎನ್ನುವ ದೃಷ್ಟಿಯಿಂದ ಹೋಗುತ್ತಿದ್ದಾರೆ, ಕಾರಣ ಒಂದು ಸಾರಿ ಈ ಹಳೆ ಪೇಪರ್ ಮತ್ತು ಖಾಲಿ ಶೀಷಾಯಿ ಮಾರುವವನಿಗೆ ಜಾಕ್‌ಪಾಟ್‌ನಲ್ಲಿ ೧೫ ಲಕ್ಷ ರೂಪಾಯಿ ಬಂತು, ಇದನ್ನು ನೋಡಿ ಎಲ್ಲಾ ಹಳೇ ಪೇಪರ್ ಮತ್ತು ಖಾಲಿ ಶೀಷಾಯಿ ಮಾರುವವರು ಇದರಿಂದ ಈಸಿ ಮನಿ ಮಾಡಬಹುದು ಎಂದು ಎಲ್ಲರೂ ಈ ರೇಸಿಗೆ ಹೋಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದು ಅಲ್ಲದೆ ನಮ್ಮ ಸರ್ಕಾರದ ಕಚೇರಿಗಳಲ್ಲಿ ಇರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳು, ಸಣ್ಣ ಸಣ್ಣ ಅಧಿಕಾರಿಗಳು, ಗುಮಾಸ್ತರು ಈ ರೇಸಿನಲ್ಲಿ ಇರುವುದನ್ನು ನೋಡಿದ್ದೇನೆ. ಇದಕ್ಕೆ ಎಲ್ಲಾ ಕಾರಣರು ಯಾರು ಎಂದರೆ ನಮ್ಮ ಅರ್ಥಸಚಿವ ಪೂರ್ಣಪಡೆಯವರಾ ಎಂದು ಹೇಳಬೇಕಾಗಿದೆ. ಈ ನಮ್ಮ ಅರ್ಥಸಚಿವರು ಬಂದ ಮೇಲೆ ಜನರು ಹೆಚ್ಚು ರೇಸ್‌ನಲ್ಲಿ ಹೋಗಿ ಕೆಡಲಿಕ್ಕೆ ಕಾರಣ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ಹೇಳುವುದಾದರೆ ಮೊದಲು ಬೇಸಿಗೆ ಕಾಲದಲ್ಲಿ ರೇಸ್ ನಡೆಯುತ್ತಾ ಇತ್ತು, ಅದು ಎಷ್ಟು ದಿವಸ ನಡೆಯುತ್ತಾ ಇತ್ತು ಎಂದರೆ ಮೊದಲು ೧೬ ದಿವಸ ಆಗುತ್ತಿತ್ತು. ನಂತರ ೨೨ ದಿವಸ ಆಯಿತು ಕೊನೆಗೆ ನಮ್ಮ ಅರ್ಥಸಚಿವರು ಬಂದ ಮೇಲೆ ಏನಾಯಿತು ಎಂದರೆ ಇವರು ಹಣ, ಹಣ ಎಂದು ಕೊಂಡು ೪೨ ದಿವಸದ ವರೆಗೆ ಮಾಡಿದರು. ನಮ್ಮ ಅರ್ಥಸಚಿವರು ಹೋದವರ್ಷ ಅವರಿಗೆ ಬ್ಲಾಂಕ್ ಚೆಕ್ ಸೈನ್ ಮಾಡಿಕೊಟ್ಟಿದ್ದಾರೆ. ಕಾರಣ ಇವರನ್ನು ಬಹಳ ಚೆನ್ನಾಗಿ ನೋಡಿಕೊಂಡಿದಾರೆ ಎಂದು ಕಾಣುತ್ತದೆ. ಇವೊತ್ತಿನ ದಿವಸ ಒಂದು ವಾರಕ್ಕೆ ಮೂರು ದಿವಸ ರೇಸು ಎಂದರೆ ಏನು ಅರ್ಥ ನನಗೆ ತಿಳಿಯುತ್ತಾ ಇಲ್ಲ. ಬಡಜನರು ಈ ರೇಸಿಗೆ ಹೋಗಿ ತಾವು ದುಡಿದ ಹಣವನ್ನೆಲ್ಲಾ ಕಳೆದುಕೊಂಡು ಗೋಳಾಡುವುದು ಇವರಿಗೆ ಅರ್ಥವಾಗುವುದಿಲ್ಲ; ಏತಕ್ಕೆಂದರೆ ನಮ್ಮ ಅರ್ಥಸಚಿವರು ಬಡಜನರ ಮಧ್ಯೆ ಹುಟ್ಟಿಲ್ಲ, ಆದ್ದರಿಂದ ಇಂತಹವರು ನಮ್ಮ ಅರ್ಥಸಚಿವರಾಗಿ ಬಂದದ್ದು ನಮ್ಮ ದುರಾದೃಷ್ಟ ಎಂದು ಹೇಳಿಕೊಳ್ಳಬೇಕಾಗಿದೆ. ಇವರು ರೇಸ್ ಕೋರ್ಸ್‌ಗೆ ಬ್ಲಾಂಕ್ ಚೆಕ್ ಕೊಟ್ಟಿ ಹಾಗೆ ಎಷ್ಟು ದಿವಸ ಬೇಕಾದರು ನಡೆಸಿಕೊಳ್ಳಿ ಎಂದು ಹೇಳಿದ್ದಾರೆ, ಮತ್ತೆ ಬೊಂಬಾಯಿ, ಕಟ್ಟಕತ್ತಾ ಅಲ್ಲಿ ಬೆಟ್ಟಿಂಗ್ ತೆಗೆದುಕೊಳ್ಳಲಿಕ್ಕೆ ಹೇಳಿದ್ದಾರೆ, ಶುಕ್ರವಾರ ಶನಿವಾರ, ನಂತರ ಬಾನುವಾರ ಏತಕ್ಕೆ ಸುಮ್ಮನೆ ಕುಳಿತುಕೊಳ್ಳುತ್ತೀರಿ ನಾವು ನಮ್ಮ ಅಧಿಕಾರಿಗಳು ಬರುತ್ತೇವೆ ಇಲ್ಲಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ೧೯೫೩–೫೪ರಲ್ಲಿ ಹೇಗೆ ಇತ್ತು ಎಂದರೆ ಬಕೆಟ್ ಷಾಪ್ ಎಂದು ಇದ್ದವು, ಅದು ಕಲ್ಕತ್ತಾ ರೇಸ್ ಆಗಲಿ, ಬೊಂಬಾಯಿ ರೇಸ್ ಆಗಲಿ. ಇಲ್ಲಿ ಒಂದೂವರೆ ರೂಪಾಯಿ ಬೆಟ್ಟಿಂಗ್ ತೆಗೆದುಕೊಳ್ಳುತ್ತಿದ್ದರು, ನಾವು ಬೆಳಿಗ್ಗೆ ೧೦ ಗಂಟೆಗೆ ಮನೆಯಿಂದ ಹೊರಟರೆ ರಾತ್ರಿ ೯ ಗಂಟೆಗೆ ವಾಪಸ್ಸು ಬರುತ್ತಿದ್ದೆವು, ನಮಗೆ ಈ ರೇಸಿನಲ್ಲಿ ಬರುತ್ತದೆ ಎಂದು ಈ ಅವಸ್ಥೆ ಪಡುತ್ತಿದ್ದೆವು ಇದರಲ್ಲಿ ನಾವು ೫೦ ರೂಪಾಯಿ ಬೆಟಿಂಗ್ ಮಾಡಿದರೆ ನಮಗೆ ಬರುತ್ತಾ ಇದ್ದುದು ಸುಮಾರು ಒಂದೂ ರೂಪಾಯಿ ಅಥವಾ ಒಂದೂಕಾಲು ರೂಪಾಯಿ ಬರುತ್ತಿತ್ತು. ಈ ವಾರ ಬರಲಿಲ್ಲ ಮುಂದಿನ ವಾರ ಬರುತ್ತದೆ ಎಂದು ಹೀಗೆ ಹಣವನ್ನೆಲ್ಲಾ ಕಳೆದುಕೊಳ್ಳುತ್ತಿದ್ದೆವು. ಈಗ ನಮ್ಮ ಅರ್ಥಸಚಿವರು ಬಂದು ಈ ರೇಸನ್ನು ವಾರಕ್ಕೆ ಮೂರು ಸಾರಿ ಮಾಡಿದ್ದಾರೆ ಇದು ನ್ಯಾಯವೇ, ಎಂದು ಅಪೀಲು ಮಾಡಿ ಕೇಳುತ್ತೇನೆ. ಏತಕ್ಕೆ ಎಂದರೆ ನೀವು ಮಾಡಿಕುವುದು ತಪ್ಪು ಬದಲಾಯಿಸಿ ಎಂದರೆ ನಿಮಗೆ ಬಹುಮತ ಇಲ್ಲ ಎಂದು ಹೇಳುತ್ತಾರೆ, ಅದುದರಿಂದ ಇದನ್ನು ವಾಸ್ತವವಾಗಿ ಯೋಚನೆಮಾಬೇಕು, ತಾವು ಬಡ ಜನರ ಮಧ್ಯೆ ಹುಟ್ಟಿ ಬೆಳೆದಿದ್ದರೆ ತಾವು ಈ ರೀತಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತಾ ಇರಲಿಲ್ಲ. ಈಗ ಇಲ್ಲಿ ಆಗತಕ್ಕ ರೇಸಿಗೆ ಎಲ್ಲಿಂದಲೋ ಬೆಟ್ಟಿಂಗ್ ಕಟ್ಟುತ್ತಾರೆ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ವೇದಾವ್ಯಾಸ್‌ನಲ್ಲಿ ಡಿ.ಎಂ.ಕೆ. ಸರ್ಕಾರ ಇದೆ ಈಗ ಅಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಅವರಿಗೆ ಅಷ್ಟು ವರಮಾನ ಏನೂ ಇಲ್ಲ, ನಮಗಿಂತ ವರಮಾನ ಅವರಿಗೆ ಕಡಿಮೆ ಇದೆ ಎಂದು ಹೇಳಬಹುದು. ಅಂತಹವರು ಈ ರೇಸನ್ನು ಏಪ್ರಿಲ್ ಫಸ್ಟ್‌ನಿಂದ ಪೂರಾ ಮಾಡಿದ್ದಾರೆ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಅವರು ಈ ಕೆಲಸವನ್ನು ಬಹಳ ಧೈರ್ಯವಾಗಿ ಮಾಡಿದ್ದಾರೆ ಎಂದು ಹೇಳಬಹುದು ಆ ಧೈರ್ಯ ನಮ್ಮ ಅರ್ಥಸಚಿವರಿಗೆ ಇಲ್ಲವಾಗಿದೆ. ಇಲ್ಲಿವರಿಗೆ ಈಗ ಏನಾಗಿದೆ ಎಂದರೆ ಯಾವ ಬಾಬಿನಲ್ಲಾದರೂ ಮಾಡ್ಲಿ ಬಂದರೆ ಸರಿ. ಯಾರಿಗೆ ತೆರಿಗೆ ಹಾಕಬೇಕು, ಯಾರಿಗೆ ತೆರಿಗೆ ಹಾಕಬಾರದು ಎನ್ನುವುದು ನಮ್ಮ ಅರ್ಥಸಚಿವರಿಗೆ ಗೊತ್ತಿಲ್ಲ. ಇಂತಹವರ ಕಾಲದಲ್ಲಿ ಬಡಜನರು ದುಡಿದು ತಂದ ಹಣವನ್ನು ಈ ರೇಸಿಗೆ ಹಾಕುವುದರಿಂದ ಮನೆಯಲ್ಲಿರತಕ್ಕ ಹೆಣ್ಣು ಮಕ್ಕಳ ಪರಿಸ್ಥಿತಿ ನೋಡವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ಮೂರೂವರೆ ರೂಪಾಯಿ ಕೊಟ್ಟು ಒಂದು ಕೆ.ಜಿ. ಅಕ್ಕಿ ತಂದು ಊಟ ಮಾಡುವುದಕ್ಕೆ ಗತಿ ಇರುವುದಿಲ್ಲ, ಇಂತಾದ್ದರಲ್ಲಿ ಈ ಬಡಜನರಿಗೆ ರೇಸ್ ಬೇಕಾಗಿದೆ. ಇದನ್ನು ನೋಡಿದರೆ ಈ ಸರ್ಕಾರವನು ನೀತಿಯಿಲ್ಲದ ಸರ್ಕಾರ ಎಂದು ಹೇಳಿದರೆ ತಪ್ಪಾಗಲಾರದು. ಇವೊತ್ತಿನ ದಿವಸ ಬಡ ಹೆಣ್ಣುಮಕ್ಕಳು ಹೊಟ್ಟೆಗೆ

ಲ್ಲದೇ ಮನೆಯಲ್ಲಿ ಕಷ್ಟ ಪಡುತ್ತಾ ಇರತಕ್ಕ ಕಾಲದಲ್ಲಿ ಈ ರೇಸ್ ಕೋರ್ಸ್ ಗೇಟ್‌ನಲ್ಲಿ ೧೦ ರೂಪಾಯಿ ಮಾಡಿದರೆ ಬರುವುದಿಲ್ಲ ಎಂದು ಹೇಳಿ ಎರಡು ರೂಪಾಯಿ ಮಾಡಿದ್ದಾರೆ. ಬಡವರು ಎಲ್ಲರೂ ಬಂದು ನೋಡಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದಾರೆ, ಇದನ್ನೆಲ್ಲಾ ನೋಡಿದರೆ ತಮಗೆ ನಮ್ಮ ಸರ್ಕಾರ ನೀತಿಯುತ ಸರ್ಕಾರ ಎಂದು ಹೇಳುವುದಕ್ಕೆ ಧೈರ್ಯ ಇದೆಯೆ ? ನಿಮಗೆ ಧೈರ್ಯ ಇದ್ದರೆ. ಹೊರಗಡೆ ಬಂದು ಹೇಳಿ, ಆವಾಗ ಜನರೇ ತೀರ್ಮಾನ ಮಾಡುತ್ತಾರೆ, ನಂತರ ನಿಮ್ಮ ಸರ್ಕಾರದ ನೀತಿ ಗೊತ್ತಾಗುತ್ತದೆ. ತಾವು ಆ ರೀತಿಯಲ್ಲಿ ಅನ್ಯಾಯವನ್ನು ಮಾಡಿ ಹಣ ಸಂಪಾದನೆ ಮಾಡುತ್ತಿದ್ದೀರಿ ಎಂದು ಹೇಳದೇ ಗತ್ಯಂತರವಿಲ್ಲ.

ಆದ್ದರಿಂದ ಈ ರೀತಿ ಮಾಡುತ್ತಿರುವುದು ತಪ್ಪು ಎಂದು ಹೇಳುತ್ತೇನೆ. ಸ್ವಾಮಿ ದಯಮಾಡಿ ರೇಸನ್ನು ರದ್ದು ಮಾಡಿ ಎಂದು ಹೇಳುತ್ತಿದ್ದೇನೆ. ಫೋರ್ಡ್‌ಯವರು ಅರ್ಥಸಚಿವರು ಆಗಿರುವ ಕಾಲದಲ್ಲಿ ತಮಗೆ ಇದಕ್ಕಿಂತ ಹೆಚ್ಚು ಕೆಟ್ಟ ಹೆಸರು ಬರಲಾರದೆಂದು ಕಾಣುತ್ತದೆ. ಈ ಬೆಂಗಳೂರು ನಗರದಲ್ಲಿ ತಮಗೆ ಎಲ್ಲರಿಗಿಂತ ಜಾಸ್ತಿ ಕೆಟ್ಟ ಹೆಸರು ಬಂದಿರುವುದು. ಈ ಕೆಟ್ಟ ಹೆಸರನ್ನು ತೊಡೆದು ಹಾಕಲು ಪ್ರಯತ್ನ ಮಾಡಬೇಕು. ಹಣ ಬರುತ್ತದೆ, ಹೋಗುತ್ತದೆ. ಹಿಂದೆ ಬಕೆಟ್ ಷಾಪ್ಸ್ ಇಟ್ಟು ರೀತಿ ಆ ಜಾಗದಲ್ಲಿ ಬಕೆಟ್ ಷಾಪ್ಸ್ ಇಡಿ, ೨೪ ದಿವಸ ಜೂಜು ಅಡಲಿಕ್ಕೆ ಕಾಟನ್ ಸಟ್ಟಾ ಇದೆ. ಸರ್ಕಾರದವರೇ ಅದನ್ನು ಪ್ರೋತ್ಸಾಹಿಸಿಕೊಂಡರೆ ಅದರಿಂದ ಬೇಕಾದಷ್ಟು ಹಣ ಬರುತ್ತದೆ, ೨೫ ಪರ್ಸೆಂಟ್ ನಮಗೆ ಕೊಡಬೇಕು ಅಥವಾ ೫೦ ಪರ್ಸೆಂಟ್ ನಿಮಗೆ ಕೊಡಬೇಕು ಎಂದು ಹೇಳಿದರೆ ಅದಕ್ಕೂ ಲೈಸನ್ಸ್ ತೆಗೆದುಕೊಳ್ಳುವ ಜನರು ಇದ್ದಾರೆ, ಹಣವೇ ಪ್ರಾಧಾನ್ಯ ಎಂದು ಗಮನಿಸುವುದಾದರೆ ನ್ಯಾಯವಲ್ಲದ ಮಾರ್ಗದಲ್ಲಿ ಹಣ ಬರುತ್ತದೆ. ನ್ಯಾಯವಾದ ಮಾರ್ಗದಲ್ಲಿ ಹಣ ಬರುವುದು ಕಡಿಮೆ. ನೀವು ನ್ಯಾಯವಲ್ಲದ ಮಾರ್ಗವನ್ನು ಅನುಸರಿಸುತ್ತಿದ್ದೀರಿ. ಇದರ ಜೊತೆಗೆ ಶ್ರೀಮಾನ್ ನಾಯಿಡುರವರು ಇನ್ನೊಂದು ವಾದವನ್ನು ನಾನು ಒಪ್ಪುತ್ತೇನೆ. ಶಾಮಣ್ಣನವರು, ಕೃಷ್ಣನ್, ಅವರು ಒಪ್ಪುವುದಿಲ್ಲ. ಈ ಸ್ಥಳವನ್ನು ಬೇರೆ ಕಡೆ ವರ್ಗಾಯಿಸಬೇಕು ಎಂದು ಏನು ಹೇಳುತ್ತಾರೆ ಅದಕ್ಕೆ ನಾನು ವಿರುದ್ಧ. ರೇಸ್ ನಿಲ್ಲಿಸಿ ಎಂದು ಹೇಳುವವರು ಬೇರೆ ಕಡೆ ವರ್ಗಾಯಿಸಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮೊದಲು ರೇಸಿಗೋಸ್ಕರ ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದೆವು. ಟ್ಯಾಕ್ಸಿ ಮಾಡಿಕೊಂಡು ಹೋಗುತ್ತಿದ್ದೆವು. ೧೦ ಮೈಲಿ ಆಚೆ ಹಾಕಿದರೆ ಜನಗಳು ಹೋಗುವುದಿಲ್ಲ ಅಂದರೆ ನಂಬುವುದಕ್ಕಾಗುವುದಿಲ್ಲ. ಹೋಗೆ ಹೋಗುತ್ತಾರೆ, ಬ್ರಿಟಿಷರ ಆಳ್ವಿಕೆಯಲ್ಲಿ ಮಿಲಿಟರಿಗೆ ಕುದುರೆಗಳು ಬೇಕಾಗಿತ್ತು ಎಂದು ಬ್ರಿಟಿಷರು ಸ್ಟಡ್ ಫಾರಂ ಮಾಡಿ ಕುದುರೆಗಳನ್ನು ಸಾಕುತ್ತಿದ್ದರು. ಕೆಲವು ಒಳ್ಳೆಯ ಕುದುರೆಗಳನ್ನು ಜೂಜಿಗೆ ಬಿಡುತ್ತಿದ್ದರು. ಹಿಂದೆ ಇದ್ದ ಯದುವರಾಜರು ಪೋಲೋ ಆಡಲಿಕ್ಕೆ ಕುದುರೆಯನ್ನು ಉಪಯೋಗಿಸುತ್ತಿದ್ದರು. ಈಗಿನ ಕಾಲದಲ್ಲಿ ಕುದುರೆಗಳ ಉಪಯೋಗ ಇಲ್ಲ. ಈಗ ಆಕಾಶದಲ್ಲಿ ವಿಮಾನದಲ್ಲಿ ಹಾರಾಡಬೇಕಾದರೆ ಕುದುರೆಗಳ ಉಪಯೋಗ ಇಲ್ಲ. ಕುದುರೆ ಯಾರಿಗೆ ಉಪಯೋಗವಾಗುತ್ತದೆಂದರೆ ಜೂಜನ್ನು ನಡೆಸುತ್ತಾ ಇರುವವರಿಗೆ ಮತ್ತು ಸರ್ಕಾರದವರಿಗೆ ಉಪಯೋಗವಾಗುತ್ತದೆಯೇ ವಿನಹ ಬೇರೆಯವರಿಗೆ ಆಗುವುದಿಲ್ಲ, ಆದ ರಿಂದ ದಯಮಾಡಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಕಳಕಳಿಯಿಂದ ಕೈಮುಗಿದು ಬೇಡಿ ಕೊಳ್ಳುತ್ತೇನೆ ಈ ಹಾಳು ರೇಸನ್ನು ನಿಲ್ಲಿಸಿ, ಪಜಾ ಮಾಡಿ. ಎಲ್ಲೂ ವರ್ಗಾವಣೆ ಮಾಡಬೇಡಿ ಇನ್ನು ರೇಸ್ ಕೋರ್ಸ್ ಸ್ಥಳವನ್ನು ಖಾಲಿ ನಿವೇಶನವಾಗಿ ಇಡಬೇಕು ಎಂದು ಮಾನ್ಯ ಮಿತ್ರರು ಸಲಹೆ ಮಾಡಿದ್ದಾರೆ. ಹಾಗೆ ಇಟ್ಟರೆ ಅದು ಇರುವುದಿಲ್ಲ ಎಂದು ನಮ್ಮೆಲ್ಲರ ಅನುಭವ. ನಾನು ಬೆಂಗಳೂರು ನಗರದೊಳಗೆ ೭೩ ವರ್ಷದಿಂದ ಇದ್ದೇನೆ. ಬೇರೆ ಊರಿನಿಂದ ಬಂದವನಲ್ಲ, ಮೊದಲು ಬೆಂಗಳೂರು ನಗರ ಹೇಗಿತ್ತು, ಈಗ ಹೇಗಿದೆ ಎಂದು ನನಗೆ ಗೊತ್ತಿದೆ. ಖಾಲಿ ನಿವೇಶನ ಇಡುವ ಜನ ನೀವು ಅಲ್ಲ. ಖಾಲಿ ನಿವೇಶನ ಇದ್ದರೆ ಅದನ್ನು ಯಾವ ಮಂತ್ರಿಗೆ ಯಾವ ಅಧಿಕಾರಿಗೆ ಕೊಡಬೇಕು ಅಥವಾ ಯಾವ ಕಟ್ಟಡವನ್ನು ಕಟ್ಟಬೇಕು ಎಂದು ಯೋಚನೆ ಮಾಡಿ ಖಾಲಿ ನಿವೇಶನವನ್ನು ಹಾಳು ಮಾಡುತ್ತೀರಿ. ಅಲ್ಲಿ ಬಿಸಿನೆಸ್ ಕಾಂಪ್ಲೆಕ್ಸ್ ಮಾಡುವುದರಿಂದ ೫ ರಿಂದ ೧೦ ಕೋಟಿ ರೂಪಾಯಿವರೆಗೂ ವರಮಾನ ಬರುತ್ತದೆ. ಅಲ್ಲಿ ಬೇಕಾದಹಾಗೆ ಟ್ಯಾಕ್ಸ್ ವಸೂಲಾಗುತ್ತದೆ. ರೇಸಿನಿಂದ ಬರುವ ಆದಾಯದಷ್ಟೆ ಬರುತ್ತದೆ. ರೇಸನ್ನು ಬೇರೆ ಕಡೆ ವರ್ಗ ಮಾಡದೆ ರೇಸನ್ನು ಪಜಾ ಮಾಡುತ್ತೇವೆ ಎಂದು ಮಾನ್ಯ ಫೋರ್ಡ್‌ಯವರು ಧೈರ್ಯವಾಗಿ ಹೇಳಬೇಕು. ಆಗ ತಮ್ಮ ಕೀರ್ತಿ ಎಲ್ಲಿ ಹೋಗುತ್ತದೆ ಎಂದರೆ ಹೆಂಗಸರು ನಿಮ್ಮನ್ನು ಹರಸುತ್ತಾರೆ. ಎಂತಹ ಮಂತ್ರಿಗಳು ಬಂದರು ಎಂದು ಹಾಳು ಸರ್ಕಾರದವರು ರೇಸನ್ನು ಯಾತಕ್ಕೆ ನಿಲ್ಲಿಸಬಾರದು ಎಂದು ನೂರಕ್ಕೆ ೯೯ ಜನ ಬೈಯುತ್ತಿದ್ದಾರೆ, ಹೆಂಗಸರು ೧೦೦ಕ್ಕೆ ೧೦೦ ಜನರೂ ಬೈಯುತ್ತಿದ್ದಾರೆ. ರೇಸು ನಿಲ್ಲಿಸಬೇಕೆಂದು ಕಾಂಗ್ರೆಸ್ ಸದಸ್ಯರು ಮಂತ್ರಿಗಳು ಒತ್ತಾಯ ಮಾಡಬೇಕು ಇಲ್ಲದಿದ್ದರೆ ಅಂತಹ ಮಂತ್ರಿಗಳು ಬೇಕಿಲ್ಲ ಎಂದು ಕಾಂಗ್ರೆಸ್ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ ಎಸ್. ಆಮಣ್ಣವರ್.—ಬಹಳ ಜನರು ರೇಸ್ ಆಡುವವರು ಬೊಂಬಾಯಿನಿಂದ ಪ್ಲೇನಲ್ಲಿ ಬಂದು ಆಡುತ್ತಾರೆ. ಅವರು ಬಡವರೊ ಶ್ರೀಮಂತರೊ ?

ಶ್ರೀ ಕೆ. ಎಂ. ನಾಗಣ್ಣ.—ಅಂತಹವರು ಕೇವಲ ೮–೧೦ ಜನ ಇರುತ್ತಾರೆ. ಅವರು ಬಂದು ನಮ್ಮನ್ನೆಲ್ಲಾ ಎಕ್ಸ್‌ಪ್ಲಾಯಿಟ್ ಮಾಡುತ್ತಾರೆ. ಅವರು ಜಾಕಿಗೆ ದುಡ್ಡು ಕೊಟ್ಟು ಬೇರೆ ಕುದುರೆ ಗೆಲ್ಲುವಂತೆ ಮಾಡಿ ದುಡ್ಡು ಮಾಡುವವರು ಅಯೋಗ್ಯರು.

† ಶ್ರೀ ಎಂ. ವೈ. ಘೋರ್ಪಡೆ.—(ಹಣಕಾಸಿನ ಮತ್ತು ವಸತಿ ಶಾಖೆಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಇದು ಹೊಸ ವಿಷಯವೇನೂ ಅಲ್ಲ. ಹೋದವರ್ಷ ಕೂಡ ಅದರ ಬಗ್ಗೆ ಚರ್ಚೆಯಾಯಿತು. ಈಗ ನಾವು ಚರ್ಚೆ ಮಾಡುವಂಥ ವಿಷಯ ರೇಸ್ ಇರಬೇಕೋ ಬೇಡವೋ ಎಂಬುದಲ್ಲ, ರೇಸ್ ಸಂಪೂರ್ಣವಾಗಿ ತೆಗೆದುಹಾಕುವ ನಿರ್ಧಾರ ಬಂದರೆ ಅದರಿಂದ ನನಗೆ ಏನೂ ಆತಹ ದುಃಖ ಆಗುವುದಿಲ್ಲ, ಅನಾನುಕೂಲವೂ ಆಗುವುದಿಲ್ಲ. ಆದರೆ ಇವತ್ತು ರೇಸನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೋ ಬೇಡವೋ ಚರ್ಚೆ ಮಾಡುತ್ತಿಲ್ಲ. ರೇಸ್ ತೆಗೆದುಹಾಕಬೇಕು ಎಂದು ಹೇಳಿ ಈ ಚರ್ಚೆಯಲ್ಲಿ ಬರಲಿಲ್ಲ, ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಕೂಡ ಮಾತನಾಡುವಾಗ ಹೇಳಿದರು, ಸಮಾಜವಾದಿ ರಾಷ್ಟ್ರದಲ್ಲೂ ಕೂಡ ರೇಸ್ ಇದೆ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಬೆಟ್ಟಿಂಗ್ ಇಲ್ಲ ಎಂದು ಹೇಳಿದೆ.

ಶ್ರೀ ಎಂ. ವೈ. ಘೋರ್ಪಡೆ.—ಈಗ ರೇಸ್ ಕೋರ್ಸನ್ನು ಬೇರೆ ಕಡೆ ಶಿಫ್ಟ್ ಮಾಡಬೇಕೆ ಎನ್ನುವುದು ಪ್ರಶ್ನೆ. ಈ ಪ್ರಶ್ನೆಯನ್ನು ರಾಜ್ಯ ಸರ್ಕಾರದವರು ಹಲವಾರು ವರ್ಷಗಳಿಂದ ಪರಿಶೀಲನೆ ಮಾಡಿದ್ದಾರೆ. ಅದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೂಡ ಕೊಟ್ಟಿದ್ದಾರೆ. ಈಗ ಪ್ರಶ್ನೆಗೆ ಹಿನ್ನೆಲೆ ಇದೆ. ಇದನ್ನು ಹೊಸದಾಗಿ ಏನೂ ನೋಡುತ್ತಿಲ್ಲ ಶ್ರೀ ರಾಮಕೃಷ್ಣ ಹೆಗಡೆಯವರು ಹಣಕಾಸು ಮಂತ್ರಿಗಳಾಗಿದ್ದಾಗ ಕೂಡ ಈ ಪ್ರಶ್ನೆ ಬಂದಿತ್ತು. ಅವರು ಒಂದು ಕಮಿಟಿಯನ್ನು ಕೂಡ ನೇಮಕ ಮಾಡಿದ್ದರು.

ಶ್ರೀ ಕೆ. ಎಂ. ನಾಗಣ್ಣ —ರಾಮಕೃಷ್ಣ ಹೆಗಡೆಯವರು ರೇಸ್ ಅಭಿಮಾನಿಗಳು.

ಶ್ರೀ ಎಂ. ವೈ. ಘೋರ್ಪಡೆ.—ಆಗ ಏನು ನಡೆಯಿತು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕು. ಸ್ವಲ್ಪ ಸಂಕ್ಷಿಪ್ತವಾಗಿ ನಾವು ತಿಳಿದುಕೊಂಡು ಯೋಚನೆ ಮಾಡೋಣ. ಅವರು ಒಂದು ಕಮಿಟಿಯಲ್ಲಿ ಅದರ ಪ್ರಾಸ್ ಆಂಡ್ ಕಾನ್ಸ್ ಸ್ವಲ್ಪ ನೋಡಿದರು, ಅದರ ಅಡ್ವಾಂಟೇಜಸ್ ಮತ್ತು ಡಿಸ್ ಅಡ್ವಾಂಟೇಜಸ್ ಏನು ಎಂದು ನೋಡಿದರು. ಆ ಜಾಗವನ್ನು ಲಂಗ್‌ಸ್ಟೇಸಾಗಿ ಉಳಿಸಬೇಕು ಎನ್ನುವ ವಿಚಾರ ಆ ಕಾಲಕ್ಕೆ ಇತ್ತು. ರೇಸ್ ಕೋರ್ಸನ್ನು ಶಿಫ್ಟ್ ಮಾಡಬೇಕಾದರೆ ೨೫೦ ಎಕರೆ ಬೇರೆ ಕಡೆ ಬೇಕಾಗುತ್ತದೆ. ಅಕ್ವೈರ್ ಮಾಡುವುದಕ್ಕೆ ೨ ಕೋಟಿ ರೂಪಾಯಿ ಬೇಕು ಎಂದು ಆ ಕಾಲಕ್ಕೆ ಲೆಕ್ಕ ಮಾಡಿದ್ದರು, ಮತ್ತೆ ಈಗ ಇರತಕ್ಕ ರೇಸ್‌ಕೋರ್ಸ್ ಏನಿದೆ ಅದು ಇನ್‌ಸಫಿಷಿಯಂಟ್ ಇದೆ ಸಾಕಷ್ಟು ಜಾಗ ಇಲ್ಲ ಎಂಬುದನ್ನು ತಿಳಿದುಕೊಂಡರು. ಗೌರ್ನಮೆಂಟ್ ಪ್ಲೇಯಿಂಗ್ ಟ್ರೈನಿಂಗ್ ಸ್ಕೂಲ್ ಪಕ್ಕಕ್ಕೆ ಇದನ್ನು ಸ್ಥಳಾಂತರ ಮಾಡಬೇಕೆಂಬ ವಿಚಾರವೂ ಸಹ ಇತ್ತು. ಆದರೆ ಆ ವಿಚಾರವನ್ನು ಸಹ ಕೈಬಿಟ್ಟರು. ಈ ವಿಚಾರ ಆಗಸ್ಟ್ ೧೯೭೮ರಲ್ಲಿ ಆಗಿನ ಕ್ಯಾಬಿನೆಟ್ ಮುಂದೆ ಹೋದಾಗ, ಇದನ್ನು ರೇಸ್ ಕೋರ್ಸಿನವರು ಸ್ಥಳಾಂತರ ಮಾಡುವ ವಿಚಾರ ಸರಿಯಾದುದಲ್ಲವೆಂದು ಸಂಪೂರ್ಣವಾಗಿ ಕೈಬಿಟ್ಟರು ಈಗ ಅಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. ಇದರ ಜೊತೆಗೆ ನಾವು ಬೇರೆ ಕಡೆಗೆ ಸ್ಥಳಾಂತರ ಮಾಡಿದರೆ ೨೫೦ ಎಕರೆ ಜಾಗ ಕೊಡಿಸಲು ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಮತ್ತು ಸಂಬಂಧಪಟ್ಟ ಕಟ್ಟಡಗಳನ್ನು ಅಲ್ಲಿ ಕಟ್ಟಿಸಲು ಹಣ ಖರ್ಚು ಮಾಡಬೇಕಾಗುತ್ತದೆ. ಈ ರೀತಿ ೫–೬ ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ರೇಸ್-ಕೋರ್ಸಿನ ಜಾಗದಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡಿದರೆ ಆ ದುಡ್ಡು ವಾಪಸ್ ಬರುತ್ತದೆಂದು ಮಾನ್ಯ ನಾಯ್ಡು ಅವರು ಹೇಳಿದರು. ಆದರೆ ಈ ಚರ್ಚೆಯಲ್ಲಿ ಭಾಗವಹಿಸಿದ ಅನೇಕ ಮಾನ್ಯ ಸದಸ್ಯರು, ಅದನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿದಮೇಲೆ, ಆ ಜಾಗವನ್ನು ಲಂಗ್ ಸ್ಟೇಪ್ಸ್ ಆಗಿ ಉಳಿಸಬೇಕೆಂದು ಬಲವಾಗಿ ವಾದ ಮಾಡಿದರು. ಈಗ ರಷ್ಯಾದೇಶದಲ್ಲಿ ಸಹ ಹೊಸ ಪದ್ಧತಿಯ ಪ್ರಕಾರ ಟೌನ್ ಪ್ಲಾನಿಂಗ್ ಮಾಡುತ್ತಿದ್ದಾರೆ, ಅದರ ಪ್ರಕಾರ ಅಲ್ಲಿ ಕನ್‌ಜೆಸ್ಟೆಡ್ ಏರಿಯಾ ಇಲ್ಲ ಎಂದು ಮಾನ್ಯ ಕೃಷ್ಣನ್ ಅವರು ಹೇಳಿದರು. ಈಗ ಬೆಂಗಳೂರು ನಗರ ಇಂಡಸ್ಟ್ರಿಯಲ್ ಸೆಂಟರ್ ಆಗಿರುವುದರಿಂದ ಎನ್‌ವೈರನ್‌ಮೆಂಟ್ ಪೊಲ್ಯೂಷನ್ ಆಗುತ್ತಿದೆ. ಆದಕಾರಣ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಪ್ರಶ್ನೆ ಸಹ ಬಹಳ ಮುಖ್ಯವಾದ ಪ್ರಶ್ನೆಯಾಗಿದೆ ಈಗ ಅದನ್ನು ಲಂಗ್—ಸ್ಪೇಸ್ ಆಗಿ ಉಳಿಸಿದರೂ ಸಹ ಮುಂದೆ ಆ ಜಾಗವನ್ನು ಅದೇ ರೀತಿ ಉಳಿಸಿ ಕೊಳ್ಳುವುದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲವೆಂದು ಮಾನ್ಯ ನಾಗಣ್ಣನವರು ಹೇಳಿದರು,

3-30 P. M.

ಶ್ರೀ ಕೆ. ಎಂ. ನಾಗಣ್ಣ.—ಹಿಂದಿನ ಮುನಿಸಿಪಾಲಿಟಿಯವರು ಪಾರ್ಕ್ ಎಂದು ಬಿಟ್ಟ ಜಾಗವನ್ನು ಸಹ ತಾವು ಉಪಯೋಗ ಮಾಡಿಕೊಂಡಿದ್ದೀರಿ, ಆ ಕಾರಣದಿಂದ ನಾನು ಹೇಳಿದ್ದು.

ಶ್ರೀ ಎಂ. ವೈ. ಘೋರ್ಪಡೆ.—ಟೌನ್ ಪ್ಲಾನಿಂಗ್ ಬಗ್ಗೆ ನಾವು ಮಾತನಾಡುವಾಗ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಜಾಗವನ್ನು ಪಾರ್ಕಿಗಾಗಿ ತೆಗೆದಿಡುವುದಕ್ಕೆ ಸಾಧ್ಯವೋ ಅಷ್ಟನ್ನೂ ತೆಗೆದಿಡ ಬೇಕಾಗುತ್ತದೆ. ಅದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ರೇಸ್-ಕೋರ್ಸ್‌ನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವುದಾದರೆ ೫-೬ ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುವುದು ಎಂಬುದೇ ಮುಖ್ಯವಾದ ಪ್ರಶ್ನೆಯಾಗಿದೆ. ಇದನ್ನು ಪ್ಯಾಲೇಸ್ ಗ್ರೌಂಡ್‌ಗೆ ಸ್ಥಳಾಂತರ ಮಾಡಬೇಕೆಂದು ಕೆಲವರು ಹೇಳಿದರು. ಅದು ಜಾಣತನದ ವಿಚಾರವಲ್ಲವೆಂದು ಹೇಳುತ್ತೇನೆ. ಅದನ್ನು ಇನ್ನೂ ಒಳ್ಳೆಯ ರೀತಿಯಿಂದ ನಾವು ಉಪಯೋಗ ಮಾಡಬಹುದು, ಅದನ್ನು ಬಿಟ್ಟು ಬೇರೆ ಕಡೆಗೆ ಸ್ಥಳಾಂತರ ಮಾಡ ಬೇಕಾದರೂ ಸಹ ಹಣದ ಪ್ರಶ್ನೆ ಬರುತ್ತದೆ. ಈಗ ತಮಗೆ ಗೊತ್ತಿರುವಂತೆ ಜನತಾ ಹೌಸಿಂಗ್ ಸ್ಕೀಮ್‌ಗೆ ಒಂದು ವರ್ಷಕ್ಕೆ ೪-೫ ಕೋಟಿ ರೂಪಾಯಿಗಳನ್ನು ಒದಗಿಸಲು ಎಷ್ಟು ತೊಂದರೆ ಇದೆ ಎಂಬುದು ತಮಗೆ ತಿಳಿದಿದೆ. ಜೊತೆಗೆ ನೌಕರರ ಸಂಬಳ ಹೆಚ್ಚಾಗುತ್ತಿದೆ. ಇಂತಹ ಒಂದು ವಾತಾವರಣದಲ್ಲಿ ನಮ್ಮ ಯೋಜನೆಗಳನ್ನು ಕಾಪಾಡಿಕೊಂಡು ಬರುವುದು ಮತ್ತು ಬಡಜನರಿಗೆ ಅನುಕೂಲವಾದಂತಹ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವುದು ಎಷ್ಟು ಕಷ್ಟವಿದೆ ಎಂಬುದು ಸಹ ತಮಗೆ ಗೊತ್ತಿದೆ. ಮಾನ್ಯ ನಾಗಣ್ಣನವರು ಮಾತನಾಡುವಾಗ ನನ್ನ ಬಗ್ಗೆ ಸ್ವಲ್ಪ ಮಾತನಾಡಿದರು. ನಾನು ಬಡವನಾಗಿ ಹುಟ್ಟಲಿಲ್ಲ, ಆದಕಾರಣ ಈ ರೇಸಿನಿಂದ ಬಡವರಿಗೆ ಆಗುತ್ತಿರುವ ಕಷ್ಟದ ಅನುಭವ ನನಗೆ ಆಗಿಲ್ಲವೆಂದು ಹೇಳಿದರು. ನಾನು ಬಡವನಾಗಿ ಹುಟ್ಟಿದಿದ್ದರೂ ಸಹ ನನಗೆ ರೇಸಿನ ಅನುಭವವಿಲ್ಲ. ಮತ್ತು ಸಿಲ್ಕ್ ಬಟ್ಟೆ ತೊಟ್ಟ ಅನುಭವವೂ ಸಹ ನನಗೆ ಇಲ್ಲ, ಈಗಿನ ಆಧುನಿಕ ಸಮಾಜದ ವ್ಯವಸ್ಥೆಯಲ್ಲಿ ಮತ್ತು ಆಧುನಿಕ ಶಾಸ್ತ್ರದ ಪ್ರಕಾರ ನೋಡುವುದಾದರೆ, ನಾವು ಎಲ್ಲಿಯೇ ಹುಟ್ಟಿರಲಿ, ಹುಟ್ಟುವಿಕೆಗೂ ಮತ್ತು ಅನುಭವಕ್ಕೂ ಅಷ್ಟೊಂದು ಸಂಬಂಧವಿಲ್ಲವೆಂದು ಹೇಳಬಹುದು. ಆದೇ ಹಳೆಯ ಕಾಲಕ್ಕೆ ಆದರೆ, ಒಂದು ಕಸುಬು ಗೊತ್ತಿರಬೇಕಾದರೆ, ಅದೇ ಕಸುಬು ಮಾಡುವವರ ಪಂಗಡದಲ್ಲಿ ಹುಟ್ಟಿರಬೇಕಾಗುತ್ತಿತ್ತು; ಆದರೆ ಆಧುನಿಕ ಸೋಸಿಯಾಲಜಿಯಲ್ಲಿ ಯಾರು ಎಲ್ಲಿಯೇ ಹುಟ್ಟಿರಲಿ ಅವರ ಒಂದು ಅನುಭವ, ಅಸಕ್ತಿ ಮತ್ತು ತರಬೇತಿ ಮೇಲೆ ಅವಲಂಬಿಸಿರುತ್ತದೆ. ಸಿಲ್ಕ್ ವ್ಯಾಪಾರದ ಅನುಭವ ನನಗೆ ಇಲ್ಲ, ಆದಕಾರಣ, ಆದರ ಮೇಲೆ ತೆರಿಗೆ ಹಾಕಿದರೆ, ಅದನ್ನು ಕೊಡುವ ಶಕ್ತಿ ಅವರಿಗೆ ಇದೆಯೇ ಅಥವಾ ಇಲ್ಲವೇ ಎಂಬುದು ಸಹ ನನಗೆ ಗೊತ್ತಿಲ್ಲವೆಂದು ಮಾನ್ಯ ನಾಗಣ್ಣನವರು ಹೇಳಿದರು. ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ. ಅವರಿಗೆ ವಯಸ್ಸಾಗಿದೆ, ಮತ್ತು ಅವರ ಬಗ್ಗೆ ನನಗೆ ಗೌರವವಿದೆ, ಅವರು ಒಂದೆರಡು ಮಾತು ಹೆಚ್ಚು ಹೇಳಿದರು ಎಂದು ನಾನೂ ಸಹ ಅದೇ ಧಾಟಿಯಲ್ಲಿ ಉತ್ತರ ಹೇಳುವುದು ಧರ್ಮವಲ್ಲ; ಮತ್ತು ಅದು ಒಳ್ಳೆಯದಲ್ಲ; ಈ ವಿಷಯವನ್ನು ಪ್ರೆಸ್ಟೀಜ್ ಮೇಲೆ ನೋಡಬಾರದೆಂದು ಹೇಳಿದರು. ಆದರೆ ನಾನು ಇಂಥಾದ್ದು ಮಾಡಬೇಕು, ಇಂಥಾದ್ದು ಮಾಡಬಾರದು ಎಂದು ಹೇಳುತ್ತಿಲ್ಲ; ಆದರೆ ಈಗಿನ ಒಂದು ಪರಿಸ್ಥಿತಿಯಲ್ಲಿ ಕೇವಲ ಲಕ್ಷರಿಗೋಸ್ಕರ ಇದನ್ನು ಸ್ಥಳಾಂತರ ಮಾಡಲು ೫-೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಕಷ್ಟವಾಗುತ್ತದೆ. ಈಗಿನ ಸೆಂಟ್ರಲ್ ಜೈಲ್‌ನ್ನು ಬೇರೆ ಕಡೆಗೆ ಏನಾದರೂ ಸ್ಥಳಾಂತರ ಮಾಡಿದರೆ, ಆ ಜಾಗವನ್ನು ಸಹ ಲಂಗ್-ಸ್ಪೇಸ್ ಆಗಿ ಉಳಿಸಬೇಕು. ಅದನ್ನು ಆಟದ ವೈದಾನವನ್ನಾಗಿ ಮಾಡಬೇಕು ಎಂದು ಕೆಲವರು ಹೇಳುವ ಮಾತನ್ನು ನಾವು ಗಮನಿಸಬೇಕಾಗುತ್ತದೆ. ಏಕೆಂದರೆ ಇಂದು ನಮಗೆ ಲಂಗ್-ಸ್ಪೇಸ್ ಬಹಳ ಮುಖ್ಯವಾಗಿ ಬೇಕಾಗಿದೆ. ಇದರಿಂದ ಪೊಲ್ಯೂಷನ್ ಪ್ರಾಬ್ಲಮ್ ಕಡಿಮೆ ಮಾಡಿದಂತೆ ಆಗುತ್ತದೆ ಇದೇ ಅಭಿಪ್ರಾಯ ಗಾಲ್ಫ್ ಕ್ಲಬ್‌ನ ಜಾಗಕ್ಕೂ ಅನ್ವಯವಾಗುತ್ತದೆ. ಕುದುರೆಗಳ ಬಗ್ಗೆ ಕೆಲವರಂ ಸಹಾನುಭೂತಿ ತೋರಿಸಿದರು. ಈ ಕಾಲಕ್ಕೂ ಸಹ ಕುದುರೆಗಳ ಬಗ್ಗೆ ಸಹಾನುಭೂತಿ ತೋರಿಸುವ ಜನರಿದ್ದಾರೆಂದು ತಿಳಿದು ನನಗೆ ಸಂತೋಷವಾಯಿತು. ನಾವು ಇಂದು ಹೆಲಿಕ್ಯಾಪ್ಟರ್ ಯುಗದಲ್ಲಿದ್ದರೂ ಸಹ, ಬೇರೆ ಪ್ರಾಣಿಗಳು ಇರುವುದು ಬೇಡ ಎಂದು ಹೇಳುವುದು ಸರಿಯಲ್ಲ ಪ್ರಾಣಿಗಳ ಬಗ್ಗೆ ನಮ್ಮ ಸಹಾನುಭೂತಿ ಇರಬೇಕು. ಇದೇ ಕಾರಣದಿಂದ ಇಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಹಾರ್ಸ್ ಬ್ರೀಡಿಂಗ್ ಸೆಂಟರ್‌ನ್ನು ಪ್ರಾರಂಭ ಮಾಡಿರುವುದು ಈ ರೇಸ್‌ನ್ನು ಸಂಪೂರ್ಣವಾಗಿ ಕೈ ಬಿಡಬೇಕು ಎಂಬುದು ಬೇರೆ ವಿಷಯ, ಇದನ್ನು ಸಂಪೂರ್ಣವಾಗಿ ಕೈಬಿಟ್ಟರೆ ಏನು ತೊಂದರೆ ಇದೆ ಎಂಬುದನ್ನು ಸಹ ನೋಡಬೇಕಾಗುತ್ತದೆ. ಇದನ್ನು ನಡೆಸುವುದರಿಂದ ಅನೇಕರಿಗೆ ಕೆಲಸ ಸಿಗುತ್ತದೆ. ಬೆಟಿಂಗ್ ಮಾಡಬೇಕೆಂದು ನಾವೇನೂ ಜನರಿಗೆ ಹೇಳುತ್ತಿಲ್ಲ ದುಡ್ಡು ಇರುವ ಜನರು ಬೆಟಿಂಗ್ ಮಾಡುತ್ತಾರೆ. ಇದರಲ್ಲಿ ಕೆಟ್ಟದ್ದೂ ಇದ್ದರೆ ಒಳ್ಳೆಯದೂ ಇರುತ್ತದೆ ಒಳ್ಳೆಯ ಅಂಶಗಳು ಎಂದರೆ, ಅನೇಕರಿಗೆ ಕೆಲಸಗಳು ಸಿಗುತ್ತವೆ, ತಾತ್ವಿಕವಾಗಿ ಅಥವಾ ಒಂದು ಮೊರ್ಯಾಲಿಟಿ ದೃಷ್ಟಿಯಿಂದ ಇದಕ್ಕೆ ನಾವು ಪುಷ್ಟಿ ಕೊಡುತ್ತಿದ್ದೇವೆ. ಇದರಿಂದ ಕೇವಲ ೨ ಕೋಟಿ

ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತಿರುವ ಕಾರಣ, ಇದನ್ನು ಸಂಪೂರ್ಣವಾಗಿ ರದ್ದು ಮಾಡುವುದು ಒಳ್ಳೆಯದೆಂದು ಎಲ್ಲರೂ ಸಹ ಒಪ್ಪುವುದಾದರೆ, ಅದನ್ನು ನಾನು ಖಂಡಿತವಾಗಿ ವಿರೋಧ ಮಾಡುವುದಿಲ್ಲ. ಆದರೆ ಇದರ ಬಗ್ಗೆ ನಾವು ಇಂದು ಚರ್ಚೆ ಮಾಡುತ್ತಿಲ್ಲ, ಈಗ ಚರ್ಚೆ ಮಾಡುತ್ತಿರುವುದು ಅದನ್ನು ಸ್ಥಳಾಂತರ ಮಾಡುವ ವಿಚಾರದ ಬಗ್ಗೆ. ಆ ರೀತಿ ಮಾಡಿದರೆ, ಆ ಜಾಗವನ್ನು ಲಂಗ್-ಸ್ಪೇಸ್ ಆಗಿ ಉಳಿಸಬೇಕೆಂಬುದು ಎಲ್ಲರ ಅಭಿಪ್ರಾಯವಿದ್ದರೆ ಅದೂ ಅಷ್ಟು ಸುಲಭವಾದ ಕೆಲಸವಾಗುವುದಿಲ್ಲ, ಈ ವಿಷಯ ವರ್ಷೇವರ್ಷ ಇಲ್ಲಿ ಚರ್ಚೆಗೆ ಬರುತ್ತಿರುತ್ತದೆ. ಇದನ್ನು ನಾವು ಏನಾದರು ಸ್ಥಳಾಂತರ ಮಾಡುವ ತೀರ್ಮಾನಕ್ಕೆ ಬರುವುದಾದರೆ, ಅದರ ಇಂಪ್ಲಿಕೇಷನ್ಸ್ ಏನು ಎಂಬ ಬಗ್ಗೆ ಹೊಸದಾಗಿ ನೋಡಿಕುವ ಬಗ್ಗೆ, ಒಂದು ಚಿಕ್ಕ ರಿಪೋರ್ಟ್ ತಯಾರು ಮಾಡುತ್ತೇವೆ. ಈಗ ನಮ್ಮ ಮುಂದಿರುವ ರಿಪೋರ್ಟ್ ಆಗಿನ ಕಾಲಕ್ಕೆ ಮಾಡಿದ್ದು, ಈಗಿನ ಕಾಲಕ್ಕೆ ಅದನ್ನು ಸ್ಥಳಾಂತರ ಮಾಡಲು ಹತ್ತು ಕೋಟಿ ರೂಪಾಯಿಗಳ ವರೆಗೆ ಖರ್ಚು ಬರಬಹುದೆಂದು ಕಾಣುತ್ತದೆ ಆದಕಾರಣ ಲೇಟೆಸ್ಟ್ ಇಂಪ್ಲಿಕೇಷನ್ಸ್ ಏನು ರೇಸಿಂಗ್ ದೃಷ್ಟಿಯಿಂದ ಮತ್ತು ಬೇರೆ ಎಲ್ಲ ದೃಷ್ಟಿಯಿಂದ, ಜೊತೆಗೆ ಈಗ ಚರ್ಚೆಯಲ್ಲಿ ಬಂದಿರುವ ಎಲ್ಲ ವಿಷಯ ಗಳನ್ನೂ ಗಮನದಲ್ಲಿಟ್ಟುಕೊಂಡು ಒಂದು ಚಿಕ್ಕದಾಗಿ ರಿಪೋರ್ಟ್ ತಯಾರು ಮಾಡಿ ಆಮೇಲೆ ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಬರುತ್ತದೆ.

ಈ ಸಂದರ್ಭದಲ್ಲಿ ನಾನು ಸರ್ಕಾರದ ವತಿಯಿಂದ ಇದಕ್ಕಿಂತ ಹೆಚ್ಚು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಶ್ರೀ ನಾಗಣ್ಣನವರಿಗೆ ಇಷ್ಟುಮಾತ್ರ ಹೇಳಿ ನಾನು ಇನ್ನು ಹೆಚ್ಚು ಹೇಳುವುದು ಸೂಕ್ತವಲ್ಲವೆಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಎಸ್. ಶ್ರೀನಿವಾಸರಾಂ ನಾಯ್ಡು.—ಮಾನ್ಯ ಆರ್ಥಮಂತ್ರಿಗಳು ಕೊಟ್ಟಂತ ಭರವಸೆಯ ಮೇಲೆ.....

SRI M. Y. GHORPADE.—I have only stated that I will have a fresh report on the full implication of shifting the race course, with latest financial and other implications.

ಶ್ರೀ ಕೆ. ಎಂ. ನಾಗಣ್ಣ.—ನಿಮ್ಮ ಪಾರ್ಟಿಯಲ್ಲಿ ಈ ವಿಷಯ ಚರ್ಚೆ ಮಾಡಿ ರೇಸ್ ಅಬಾಲಿಷ್ ಮಾಡುವುದಕ್ಕೆ ಒಂದು ರಿಪೋರ್ಟ್ ತಯಾರು ಮಾಡಿ.

SRI M. Y. GHORPADE.—That is a different matter. If we discuss the matter in the party and if the Government comes to that con clusion, we will abide by it.

MR. DEPUTY SPEAKER.—We will go by the scope of the resolution.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಮಾನ್ಯ ಆರ್ಥಮಂತ್ರಿಗಳು ಕೊಟ್ಟ ಭರವಸೆಯ ಮೇಲೆ ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ.

MR. DEPUTY SPEAKER.—Is it the pleasure of the House that the resolution be withdrawn ?

SOME HON MEMBERS.—No, no.

MR. DEPUTY SPEAKER.—Even if there is one dissenting voice I have to put to the vote of the House.

The question is.

"That this Assembly is of the opinion that the present Race Course be shifted to the outskirts of Bangalore City and that area be utilised to develop a business complex of international importance"

The resolution was negatived.

MR DEPUTY SPEAKER.—Next resolution. Sri B. G. Banakar to move.